ಕರ್ನಾಟಕ ಸರ್ಕಾರ

# ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ. ಮೈಸೂರು

2018–19ನೇ ಸಾಲಿನ

# **ವಾರ್ಷಿಕ ವರದಿ**





ಆಯುಕ್ತರು
ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ
ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಆವರಣ,
ದೊಡ್ಡಕೆರೆ ಮೈದಾನ, ಮೈಸೂರು– 570010

## ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ. ಮೈಸೂರು

**ಪ್ರಾಸ್ತಾವಿಕ:**

1885ರಲ್ಲಿ ಅಸ್ತಿತ್ವಕ್ಕೆ ಬಂದ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯದ ಜೊತೆ 2004ರಲ್ಲಿ ಅಸ್ತಿತ್ವಕ್ಕೆ ಬಂದ ಪರಂಪರೆ ಇಲಾಖೆಯನ್ನು ಸರ್ಕಾರಿ ಆದೇಶದ ಸಂಖ್ಯೆ: **ಕಸಂವಾಪ್ರ 10 ಕೆಎಂಯು 2012 ದಿನಾಂಕ 23-2-2012ರಲ್ಲಿ ವಿಲೀನಗೊಳಿಸಿ** ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯನ್ನು ಪುನರ್ ರಚಿಸಿ ಆಯುಕ್ತರನ್ನು ಇಲಾಖೆಯ ಮುಖ್ಯಸ್ಥರನ್ನಾಗಿ ನೇಮಿಸಲಾಗಿದೆ.

ಸರ್ಕಾರದ ಆದೇಶದ ಸಂಖ್ಯೆ:ಕಸಂವಾ 234 ಕೆಎಂಯು 2014 ದಿನಾಂಕ 13.03.2015ರಲ್ಲಿ ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯನ್ನು ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ (Archaeology, Museums and Heritage Department) ಎಂದು ಮರು ನಾಮಕರಣ ಮಾಡಿ ಆದೇಶಿಸಿದೆ.

ಪ್ರಸ್ತುತ ಇಲಾಖೆಯ ಕೇಂದ್ರ ಕಛೇರಿಯು ಮೈಸೂರಿನಲ್ಲಿದ್ದು **ಕಲೆ ಮತ್ತು ಸಂಸ್ಕೃತಿಗೆ** ಸಂಬಂಧಿಸಿದ **ಯೋಜನೆ** ಶೀರ್ಷಿಕೆ ಅಡಿಯಲ್ಲಿ ಇಲಾಖೆಯ ಕಾರ್ಯಕ್ರಮಗಳನ್ನು ಮುಂದುವರಿಸಿಕೊಂಡು ಬರುತ್ತಿದೆ.

ಈ ಇಲಾಖೆಯ ಮೂಲಭೂತ ಕಾರ್ಯ ಚಟುವಟಿಕೆಗಳೆಂದರೆ ಅನ್ವೇಷಣೆ, ಉತ್ಖನನ, ಪ್ರಾಚೀನ ಸ್ಮಾರಕಗಳ ಸಂರಕ್ಷಣೆ, ಶಾಸನಗಳ ಸರ್ವೇಕ್ಷಣೆ, ಪ್ರಾಚೀನ ನಾಣ್ಯಗಳ ಅಧ್ಯಯನ, ಸಂಶೋಧನಾ ಗ್ರಂಥಗಳ ಪ್ರಕಟಣೆ, ವಸ್ತುಸಂಗ್ರಹಾಲಯಗಳ ನಿರ್ವಹಣೆ ಹಾಗೂ ಅಭಿವೃದ್ಧಿ ಮತ್ತು ಪರಂಪರೆ ಕಾರ್ಯ ಚಟುವಟಿಕೆಗಳು, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ರೂಪಿಸಿ ಯಶಸ್ವಿಯಾಗಿ ಅನುಷ್ಠಾನಗೊಳಿಸುತ್ತಿದೆ ಹಾಗೂ ಅವಜ್ಞತೆಗೆ ತುತ್ತಾಗಿರುವ ಅಮೂಲ್ಯವಾದ ಪುರಾತನ ಶಿಲ್ಪಗಳು, ಪ್ರಾಚೀನ ಶಿಲಾಶಾಸನಗಳು, ನಾಣ್ಯಗಳು, ತಾಮ್ರ ಪಟಗಳು ಮುಂತಾದವುಗಳನ್ನು ಇಲಾಖೆಯ ವಸ್ತುಸಂಗ್ರಹಾಲಯದಲ್ಲಿ ಸಂಗ್ರಹಿಸಿ ಅವುಗಳನ್ನು ಮುಂದಿನ ಪೀಳಿಗೆಗೆ ಸಂರಕ್ಷಿಸುವ ಹಾಗೂ ಸಾರ್ವಜನಿಕ ವೀಕ್ಷಣೆಗೆ ತೆರೆದಿಡುವ ಜವಾಬ್ದಾರಿಯನ್ನು ಸಹ ಇಲಾಖೆಯು ನಿರ್ವಹಿಸುತ್ತಿದೆ.

ಐತಿಹಾಸಿಕ ಹಿನ್ನೆಲೆಯುಳ್ಳ ಮೈಸೂರು, ಶ್ರೀರಂಗಪಟ್ಟಣ, ಬೀದರ್, ಗುಲ್ಬರ್ಗಾ, ಬಿಜಾಪುರ ಹಾಗೂ ಕಿತ್ತೂರು ಸೇರಿದಂತೆ ಒಟ್ಟು ಆರು ಸ್ಥಳಗಳನ್ನು 2004ರಲ್ಲಿ ಮತ್ತು 2012-13ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಸನ್ನತಿ, ನಾಗಾವಿ, ಕಮ್ಮಟಗಿ, ಬಾದಾಮಿ, ಐಹೊಳೆ, ಬೆಂಗಳೂರು, ಲಕ್ಕುಂಡಿ, ಬನವಾಸಿ, ತಲಕಾಡು, ಬಳ್ಳಿಗಾವಿ, ಬೇಲೂರು, ಹಳೇಬೀಡು, ಮಳಖೇಡ, ಮೇಲುಕೋಟೆ ಸೇರಿದಂತೆ ಹದಿನಾಲ್ಕು ಪ್ರದೇಶಗಳನ್ನು ಪಾರಂಪರಿಕ ಪ್ರದೇಶಗಳೆಂದು ಘೋಷಣೆ ಮಾಡಲಾಗಿದೆ. ಪ್ರಸ್ತುತ 20 ಪಾರಂಪರಿಕ ಪ್ರದೇಶಗಳಿದ್ದು ಅವುಗಳಲ್ಲಿರುವ ಸ್ಮಾರಕಗಳ, ಕಟ್ಟಡಗಳ ಇನ್‌ವೆಂಟರಿ ತಯಾರಿಸಿ, ಸಮಗ್ರ ಅಭಿವೃದ್ಧಿ ಯೋಜನೆಯಂತೆ ಸಂರಕ್ಷಣಾ ಕಾರ್ಯವನ್ನು ಕೈಗೊಳ್ಳುತ್ತಿದೆ.

ಇಲಾಖೆಯ ಆಡಳಿತ ವ್ಯಾಪ್ತಿಯಲ್ಲಿ 5 ಉಪನಿರ್ದೇಶಕರ ಕಛೇರಿಗಳಿದ್ದು ಇವುಗಳು ಮೈಸೂರು, (ಪರಂಪರೆ) ಗುಲ್ಬರ್ಗಾ, ಬೆಂಗಳೂರು, ಧಾರವಾಡ ಹಾಗೂ ಕಮಲಾಪುರ (ಹಂಪಿ)ಯಲ್ಲಿ ಕಾರ್ಯನಿರ್ವಹಿಸುತ್ತಿವೆ. ಬೆಂಗಳೂರು, ಚಿತ್ರದುರ್ಗ, ಶಿವಮೊಗ್ಗ, ಮೈಸೂರು, ಶ್ರೀರಂಗಪಟ್ಟಣ, ಯಳಂದೂರು, ಹಾಸನ, ಮಡಿಕೇರಿ, ಮಂಗಳೂರು, ಕಿತ್ತೂರು, ಗದಗ, ಗುಲ್ಬರ್ಗಾ ರಾಯಚೂರು, ಹೂವಿನಹಡಗಲಿ, ಬಸವಕಲ್ಯಾಣ ಮತ್ತು ಅಥಣಿ (ಶಿಲ್ಪಕಲಾ ಗ್ಯಾಲರಿ) ಸೇರಿದಂತೆ ಒಟ್ಟು ಹದಿನಾರು ಸರ್ಕಾರಿ ಸಂಗ್ರಹಾಲಯಗಳು ಮತ್ತು ಬೆಂಗಳೂರಿನ ವೆಂಕಟಪ್ಪ ಚಿತ್ರಶಾಲೆ ಕಲಾ ಗ್ಯಾಲರಿ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿವೆ.

**1. ಸಿಬ್ಬಂದಿಯ ವಿವರಗಳು:**

| ಹುದ್ದೆಗಳ ಸಮೂಹ | ಮಂಜೂರಾಗಿರುವ ಹುದ್ದೆಗಳು | ಭರ್ತಿಯಾಗಿರುವ ಹುದ್ದೆಗಳು | ಪುರುಷರು | ಮಹಿಳೆಯರು | ಖಾಲಿಯಿರುವ ಹುದ್ದೆಗಳ ಸಂಖ್ಯೆ |
|---|---|---|---|---|---|
| ಎ | 12 | 5 | 04 | 01 | 7 |
| ಬಿ | 07 | 06 | 04 | 02 | 01 |
| ಸಿ | 84 | 44 | 29 | 15 | 40 |
| ಡಿ | 116 | 42 | 29 | 13 | 74 |
| **ಒಟ್ಟು** | **219** | **97** | **66** | **31** | **122** |

**2. ಅಧಿಕ ಪ್ರಭಾರ:–**

1. ಸರ್ಕಾರದ ಅಧಿಸೂಚನೆ ಸಂಖ್ಯೆ:ಕಸಂವಾ 59 ಕೆಎಂಯು 2018 ದಿನಾಂಕ:13/12/2018ರನ್ವಯ ಡಾ. ಆರ್.ಗೋಪಾಲ್, ನಿರ್ದೇಶಕರು(ವಸ್ತು ಸಂಗ್ರಹಾಲಯಗಳು), ಸರ್ಕಾರಿ ವಸ್ತು ಸಂಗ್ರಹಾಲಯ ಹಾಗೂ ವೆಂಕಟಪ್ಪ ಚಿತ್ರಶಾಲೆ, ಬೆಂಗಳೂರು, ಇವರನ್ನು ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು ಇಲ್ಲಿ ಖಾಲಿ ಇರುವ ನಿರ್ದೇಶಕರು (ಪುರಾತತ್ವ) ಹುದ್ದೆಯ ಅಧಿಕ ಪ್ರಭಾರದಲ್ಲಿರಿಸಲಾಗಿದೆ.
2. ಸರ್ಕಾರದ ಅಧಿಸೂಚನೆ ಸಂಖ್ಯೆ:ಕಸಂವಾ 40 ಕೆಎಂಯು 2018 ದಿನಾಂಕ:19.03.2018ರ ಅನ್ವಯ ಶ್ರೀ ಎಸ್.ಎಂ.ಪೂಜಾರಿ, ಪುರಾತತ್ವ ಸಂರಕ್ಷಣಾ ಇಂಜಿನಿಯರ್ ಇವರನ್ನು ಉಪನಿರ್ದೇಶಕರು, ಬೆಂಗಳೂರು ವಿಭಾಗ, ಬೆಂಗಳೂರು ಈ ಹುದ್ದೆಯಲ್ಲಿ ಅಧಿಕ ಪ್ರಭಾರದಲ್ಲಿರಿಸಿದೆ.
3. ಸರ್ಕಾರದ ಅಧಿಸೂಚನೆ ಸಂಖ್ಯೆ:ಕಸಂವಾ 56 ಕೆಎಂಯು 2017 ದಿನಾಂಕ:24.06.2017ರ ಅನ್ವಯ ಡಾ.ಎಸ್.ಕೆ.ವಾಸುದೇವ್, ಪುರಾತತ್ವ ಸಂರಕ್ಷಣಾ ಇಂಜಿನಿಯರ್ ಇವರನ್ನು ಉಪ ನಿರ್ದೇಶಕರು, ಹಂಪಿ, ಕಮಲಾಪುರ ಹುದ್ದೆಯಲ್ಲಿ ಅಧಿಕ ಪ್ರಭಾರದಲ್ಲಿಡಲಾಗಿದೆ.
4. ಸರ್ಕಾರದ ಅಧಿಸೂಚನೆ ಸಂಖ್ಯೆ:ಕಸಂವಾ 81 ಕೆಎಂಯು 2018 ದಿನಾಂಕ:23.06.2018ರ ಅನ್ವಯ ಡಾ.ಎಸ್.ಕೆ.ವಾಸುದೇವ್, ಪುರಾತತ್ವ ಸಂರಕ್ಷಣಾ ಇಂಜಿನಿಯರ್ ಇವರನ್ನು ಉಪ ನಿರ್ದೇಶಕರು, ಧಾರವಾಡ ಹುದ್ದೆಯಲ್ಲಿ ಅಧಿಕ ಪ್ರಭಾರದಲ್ಲಿರಿಸಿದೆ.

5. ಸರ್ಕಾರದ ಅಧಿಸೂಚನೆ ಸಂಖ್ಯೆ:ಕಸಂವಾ 91 ಕೆಎಂಯು 2015 ದಿನಾಂಕ:29.05.2015ರ ಮೇರೆಗೆ ಶ್ರೀ ಡಿ.ಶಿವಪ್ಪ, ಸಹಾಯಕ ನಿರ್ದೇಶಕರು, ಸರ್ಕಾರಿ ವಸ್ತುಸಂಗ್ರಹಾಲಯ, ಗುಲ್ಬರ್ಗಾ ಇವರನ್ನು ಸರ್ಕಾರದ ಪತ್ರಸಂಖ್ಯೆ: ಕಸಂವಾ 38 ಕೆಎಂಯು 2017, ದಿನಾಂಕ:22.04.2017 ಅನ್ವಯ ಉಪನಿರ್ದೇಶಕರು, ಗುಲ್ಬರ್ಗಾ ಇಲ್ಲಿ ಖಾಲಿ ಇರುವ ಹುದ್ದೆಗೆ ದಿನಾಂಕ:01.06.2017ರಿಂದ ಅಧಿಕ ಪ್ರಭಾರದಲ್ಲಿರಿಸಿ ನೇಮಿಸಲಾಗಿದೆ.
6. ಇಲಾಖೆಯ ಅಧಿಕೃತ ಜ್ಞಾಪನದ ಕ್ರಮಾಂಕ:ಪುಸಂಪ;ಇಎಸ್‌ಟಿ.1:ಕ.ಸಂ.13:ಬಿಡುಗಡೆ ಆದೇಶ:2018-19 ದಿನಾಂಕ:25.07.2018ರ ಮೇರೆಗೆ ಶ್ರೀ ಎಸ್.ಎಂ.ಪೂಜಾರಿ, ಪುರಾತತ್ವ ಸಂರಕ್ಷಣಾ ಇಂಜಿನಿಯರ್ (ದಕ್ಷಿಣ ವಲಯ) ಇವರನ್ನು ಪುರಾತತ್ವ ಸಂರಕ್ಷಣಾ ಇಂಜಿನಿಯರ್ (ಪರಂಪರೆ) ಹುದ್ದೆಯ ಅಧಿಕ ಪ್ರಭಾರದಲ್ಲಿ ನೇಮಿಸಲಾಗಿದೆ.

**3. ಮುಂಬಡ್ತಿಯ ವಿವರ:**

1. 4 ಕ್ಯುರೇಟರ್ ಹುದ್ದೆಗಳಿಗೆ ಸಹಾಯಕ ನಿರ್ದೇಶಕರಾಗಿ ಮುಂಬಡ್ತಿಯನ್ನು ನೀಡಲಾಗಿದೆ.
2. 1 ಪ್ರಥಮ ದರ್ಜೆ ಸಹಾಯಕರು, 2 ಶೀಘ್ರಲಿಪಿಗಾರರು ಕಂ ಕ್ಲರ್ಕ್ ಹುದ್ದೆಗಳಿಗೆ ಕಛೇರಿ ಅಧೀಕ್ಷಕರಾಗಿ ಮುಂಬಡ್ತಿಯನ್ನು ನೀಡಲಾಗಿದೆ.
3. 1 ಸಹಾಯಕ ಕ್ಯುರೇಟರ್ ಹುದ್ದೆಯಿಂದ ಕ್ಯುರೇಟರ್ ಹುದ್ದೆಗೆ ಮುಂಬಡ್ತಿಯನ್ನು ನೀಡಲಾಗಿದೆ.
4. 3 ದ್ವಿತೀಯ ದರ್ಜೆ ಸಹಾಯಕರ ಹುದ್ದೆಗಳಿಗೆ ಪ್ರಥಮ ದರ್ಜೆ ಸಹಾಯಕರ ಹುದ್ದೆಗೆ ಮುಂಬಡ್ತಿಯನ್ನು ನೀಡಲಾಗಿದೆ.
5. 1 ಬೆರಳಚ್ಚುಗಾರ ಹುದ್ದೆಯಿಂದ ಶೀಘ್ರಲಿಪಿಗಾರ ಕಂ ಕ್ಲರ್ಕ್ ಹುದ್ದೆಗೆ ಮುಂಬಡ್ತಿಯನ್ನು ನೀಡಲಾಗಿದೆ.
6. 16 ಗ್ರೂಪ್ ಡಿ ಹುದ್ದೆಗಳಿಗೆ ಅಟೆಂಡರ್ ಹುದ್ದೆಗೆ ಮುಂಬಡ್ತಿಯನ್ನು ನೀಡಲಾಗಿದೆ.

**4. ವೃಂದ ಮತ್ತು ನೇಮಕಾತಿ ನಿಯಮಗಳು:**

ಪುರಾತತ್ವ ಮತ್ತು ಸಂಗ್ರಹಾಲಯಗಳ ಇಲಾಖೆಗೆ ಸರ್ಕಾರದ ಆದೇಶ ಸಂಖ್ಯೆ:ಐಟಿವೈ:67: ಕೆಎಂಯು: 86 ದಿನಾಂಕ 28-2-1992ರಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸಲಾಗಿತ್ತು. ಪ್ರಸ್ತುತ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಪುನರ್ ರಚನೆ ಕುರಿತಂತೆ, ವೃಂದ ಮತ್ತು ನೇಮಕಾತಿ ನಿಯಮಗಳಿಗೆ ಸಂಬಂಧಿಸಿದಂತೆ ದಿನಾಂಕ:13.04.2018ರಂದು ಸರ್ಕಾರದ ಹಂತದಲ್ಲಿ ನಡೆದ ಸಭೆಯ ತೀರ್ಮಾನದಂತೆ ಸೂಕ್ತ ತಿದ್ದುಪಡಿಯ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಸದರಿ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಪರಿಷ್ಕರಿಸುವ ಸಂಬಂಧ ಸರ್ಕಾರದ ಪತ್ರ ಸಂಖ್ಯೆ ಕಸಂವಾ 76 ಕೆಎಂಯು 2018 ದಿನಾಂಕ 20.06.2018ರಲ್ಲಿನ ಆಕ್ಷೇಪಣೆಗಳಿಗೆ ಶೀಘ್ರದಲ್ಲಿಯೇ ಪರಿಷ್ಕೃತ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಸಲ್ಲಿಸಲಾಗುವುದು.

5. **ಕಾಯ್ದೆ ಮತ್ತು ನಿಯಮಗಳು:**

ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯು ಕೆಳಕಂಡ ಕಾಯ್ದೆ ಮತ್ತು ನಿಯಮಗಳನ್ನು ಹೊಂದಿರುತ್ತದೆ.

1) ಕರ್ನಾಟಕ ಪ್ರಾಚೀನ ಐತಿಹಾಸಿಕ ಸ್ಮಾರಕಗಳು ಮತ್ತು ಪುರಾತತ್ವ ಸ್ಥಳಗಳು ಮತ್ತು ಅವಶೇಷಗಳ ಅಧಿನಿಯಮ 1961 ಮತ್ತು ನಿಯಮಗಳು 1965.
2) ಕರ್ನಾಟಕ ಗುಪ್ತನಿಧಿ ಕಾಯ್ದೆ 1962 ಮತ್ತು ನಿಯಮಗಳು 1963.

6. **ಆಯ-ವ್ಯಯ:ರೂ. ಲಕ್ಷಗಳಲ್ಲಿ**

| ಕ್ರಮ ಸಂಖ್ಯೆ | ಯೋಜನಾ ಲೆಕ್ಕಶೀರ್ಷಿಕೆ | 2018-19ನೇ ಸಾಲಿಗೆ ನಿಗಧಿಪಡಿಸಿರುವ ಅನುದಾನ | 2018-19ನೇ ಸಾಲಿನಲ್ಲಿ ಬಿಡುಗಡೆಯಾಗಿರುವ ಅನುದಾನ | 2018-19ನೇ ಸಾಲಿನಲ್ಲಿ ಕೈಗೊಳ್ಳಲಾದ ವೆಚ್ಚ | ಶೇಕಡವಾರು ಬಿಡುಗಡೆಯಾಗಿರುವ ಅನುದಾನಕ್ಕೆ ಅನುಗುಣವಾಗಿ |
|---|---|---|---|---|---|
| 1 | 2205-00-102-0-78 ಸಹ್ಯಾದ್ರಿ ಪಾರಂಪರಿಕ ಅಭಿವೃದ್ಧಿ ಪ್ರಾಧಿಕಾರ | 12.00 | 12.00 | 12.00 | 100% |
| 2 | 2205-00-102-0-79 ಚಾಲುಕ್ಯ ಪಾರಂಪರಿಕ ಪ್ರದೇಶ ನಿರ್ವಹಣಾ ಪ್ರಾಧಿಕಾರ | 50.00 | 25.00 | 25.00 | 100% |
| 3 | 2205-00-102-1-92 ಲಕ್ಕುಂಡಿ ಅಭಿವೃದ್ಧಿ ಪ್ರಾಧಿಕಾರ | 50.00 | 0.00 | 0.00 | 0% |
| 4 | 2205-00-103-0-01 ಪ್ರಾಚ್ಯವಸ್ತು ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ | 909.00 | 909.00 | 918.37 | 101% |
| 5 | 2205-00-103-0-18 ಹಂಪಿ ಅಭಿವೃದ್ಧಿ ಪ್ರಾಧಿಕಾರ | 30.00 | 30.00 | 30.00 | 100% |
| 6 | 2205-00-103-0-21 ಪರಂಪರೆ ಆಯುಕ್ತರು | 1003.00 | 1001.50 | 1014.71 | 101% |
| 7 | 2205-00-103-0-25 ಸಂಸ್ಕೃತಿ ಸಂಗ್ರಹಾಲಯ | 25.00 | 12.50 | 12.50 | 100% |
| 8 | 2205-00-107-0-01 ವಸ್ತುಸಂಗ್ರಹಾಲಯದ ಅಭಿವೃದ್ಧಿ | 313.00 | 313.00 | 294.15 | 94% |

| | | | | | |
|---|---|---|---|---|---|
| 9 | 2205-00-107-0-02 ಪ್ರಾಚೀನ ವಸ್ತುಗಳ ಮತ್ತು ಅಪೂರ್ವ ಕಲಾಕೃತಿಗಳ ಅಧಿನಿಯಮ (1972) | 3.00 | 1.50 | 0.00 | 0% |
| 10 | 4202-04-101-0-02 (ಬಂಡವಾಳ ವೆಚ್ಚ) ಪುರಾತತ್ವ ಮತ್ತು ವಸ್ತು ಸಂಗ್ರಹಾಲಯಗಳು | 353.00 | 176.50 | 125.69 | 71% |
| **ಒಟ್ಟು ಮೊತ್ತ** | | **2748.00** | **2481.00** | **2432.42** | **98%** |

**7. ಮುಂದುವರೆದ ಯೋಜನಾ ಕಾರ್ಯಕ್ರಮ:**

2018-19ನೇ ಸಾಲಿಗೆ ಯೋಜನೆ ಬಾಬ್ತಿನಡಿಯಲ್ಲಿ ರೂ. **2748.00** ಲಕ್ಷ ಅನುದಾನವನ್ನು ಕಲ್ಪಿಸಲಾಗಿದ್ದು, ಇದಕ್ಕೆ ಸರ್ಕಾರದ ಆದೇಶದ ಸಂಖ್ಯೆ:ಕಸಂವಾ 92 ಕೆಎಂಯು 2018 ದಿನಾಂಕ:01.08.2018ರಲ್ಲಿ ಕ್ರಿಯಾ ಯೋಜನೆಗೆ ಸರ್ಕಾರದ ಅನುಮೋದನೆ ದೊರೆತಿದೆ.

ಪ್ರಸಕ್ತ ಸಾಲಿನಲ್ಲಿ ಬಿಡುಗಡೆಯಾಗಿರುವ ಮೊತ್ತ ರೂ. **2481.00** ಲಕ್ಷಗಳಲ್ಲಿ ರೂ. **2432.42** ಲಕ್ಷಗಳ ವೆಚ್ಚ ಮಾಡಲಾಗಿದ್ದು, ಶೇ. **98%** ರಷ್ಟು ಪ್ರಗತಿಯನ್ನು ಸಾಧಿಸಲಾಗಿದೆ.

**8. ವಿಚಾರ ಸಂಕಿರಣಗಳು, ಪುರಾತತ್ವ ಛಾಯಾಚಿತ್ರ ವಸ್ತುಪ್ರದರ್ಶನಗಳು ಮತ್ತು ಸಮಾರಂಭಗಳು:**

ಅ) "ಕೊಡಗು ಪ್ರವಾಸಿ ಉತ್ಸವ 2019"ರ ಪ್ರಯುಕ್ತ ದಿನಾಂಕ 11.01.2019ರಿಂದ 13.01.2019ರವರೆಗೆ ಛಾಯಾಚಿತ್ರ ಪ್ರದರ್ಶನ ಏರ್ಪಡಿಸಲಾಗಿತ್ತು.

ಆ) 2018-19ನೇ ಸಾಲಿನ ಮೇ 18, 2018 ರಂದು ***'ಅಂತರಾಷ್ಟ್ರೀಯ ವಸ್ತು ಸಂಗ್ರಹಾಲಯ ದಿನಾಚರಣೆ'*** ಅಂಗವಾಗಿ ಮೈಸೂರಿನ ನಾಗರಿಕರಿಗೆ ***ಮ್ಯೂಸಿಯಂ ಆನ್ ವೀಲ್ಸ್*** ಎನ್ನುವ ವಿನೂತನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ ಮೈಸೂರಿನಲ್ಲಿರುವ ಸುಮಾರು 10 ರಿಂದ 12 ವಸ್ತು ಸಂಗ್ರಹಾಲಯಗಳಿಗೆ ಸಾರ್ವಜನಿಕರನ್ನು ಹಾಗೂ ಸಂಪನ್ಮೂಲ ವ್ಯಕ್ತಿಗಳನ್ನು ಕರೆದುಕೊಂಡು ಹೋಗಿ ಸಂದರ್ಶನ ಮಾಡಿಸಲಾಯಿತು. ಈ ಕಾರ್ಯಕ್ರಮದಲ್ಲಿ 50 ಕ್ಕೂ ಹೆಚ್ಚು ಮೈಸೂರಿನ ವಿದ್ಯಾರ್ಥಿಗಳು, ಹಿರಿಯ ನಾಗರಿಕರು, ಮಹಿಳೆಯರು ಭಾಗವಹಿಸಿದ್ದರು.

ಇ) ***'ದಸರಾ 2018'*** ರ ಅಂಗವಾಗಿ ಅಕ್ಟೋಬರ್ ಮಾಹೆಯಲ್ಲಿ ಕಛೇರಿ ಆವರಣದ ಕಾರಿಡಾರ್‌ನಲ್ಲಿ ವಸ್ತು ಪ್ರದರ್ಶನದ ಪ್ರಯುಕ್ತ ರೇಖಾಚಿತ್ರದಲ್ಲಿ ಸ್ಮಾರಕಗಳು ಈ ವಿಷಯದ ಕುರಿತಾಗಿ ಛಾಯಾಚಿತ್ರ

ಪ್ರದರ್ಶನವನ್ನು ಏರ್ಪಡಿಸಲಾಗಿದ್ದು, ಈ ಪ್ರದರ್ಶನದಲ್ಲಿ ಕರ್ನಾಟಕದಲ್ಲಿರುವ ಪುರಾತನ ದೇವಾಲಯಗಳನ್ನು ರೇಖಾಚಿತ್ರ ಮತ್ತು ಛಾಯಾಚಿತ್ರ ಸಮೇತ ಪ್ರದರ್ಶಿಸಲಾಯಿತು.

ಈ) **‘*ಮಾಗಿ ಉತ್ಸವ 2018*’** ರ ಅಂಗವಾಗಿ ಮೈಸೂರಿನ ಅರಮನೆ ಆವರಣದಲ್ಲಿ ದಿನಾಂಕ 22–12–2018 ರಿಂದ 31–12–2018 ರವರೆಗೆ ಮೈಸೂರಿನ ರಾಜಮನೆತನಕ್ಕೆ ಸೇರಿದ ಅಪರೂಪದ ಛಾಯಚಿತ್ರಗಳ ಪ್ರದರ್ಶನವನ್ನು ಏರ್ಪಡಿಸಲಾಯಿತು.

ಉ) **“*ರಾಜಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ ಜೀವನ ಮತ್ತು ಸಾಧನೆ*”** ಕುರಿತು ಎರಡು ದಿನಗಳ ವಿಚಾರಸಂಕಿರಣವನ್ನು ದಿನಾಂಕ 16–02–2019 ಮತ್ತು 17–02–2019 ರಂದು ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಮಾನ್ಯ ಇಲಾಖಾ ಸಚಿವರು ಮತ್ತು ಜಿಲ್ಲಾ ಉಸ್ತುವಾರಿ ಸಚಿವರು ಈ ಕಾರ್ಯಕ್ರಮದ ಉದ್ಘಾಟನೆಗೆ ಆಗಮಿಸಿದ್ದರು. ಈ ವಿಚಾರ ಸಂಕಿರಣದಲ್ಲಿ ನೂರಾರು ವಿದ್ಯಾರ್ಥಿಗಳು, ಸಂಶೋಧಕರು ಮತ್ತು ವಿದ್ವಾಂಸರು ಭಾಗವಿಸಿದ್ದರು. ಹಾಗೂ 40 ಕ್ಕೂ ಅಧಿಕ ಪ್ರಬಂಧಗಳು ಈ ವಿಚಾರ ಸಂಕಿರಣದಲ್ಲಿ ಮಂಡಿಸಲ್ಪಟ್ಟವು.

ಊ) ***ಹಂಪಿ ಉತ್ಸವ 2018–19*** ರ ಅಂಗವಾಗಿ ದಿನಾಂಕ 02 ಮತ್ತು 03 ನೇ ಮಾರ್ಚ್ 2019 ರಂದು “ವಿಜಯನಗರ ಅಧ್ಯಯನ ಕುರಿತು 23ನೇ ವಾರ್ಷಿಕ ವಿಚಾರಸಂಕಿರಣವನ್ನು ಏರ್ಪಡಿಸಲಾಗಿತ್ತು. ಸುಮಾರು 45ಕ್ಕೂ ಅಧಿಕ ವಿದ್ವಾಂಸರು ವಿಜಯನಗರ ಅಧ್ಯಯನದ ಕುರಿತು ಪ್ರಬಂಧಗಳನ್ನು ಮಂಡಿಸಿದ್ದರು. ಸುಮಾರು 150–200 ವಿದ್ಯಾರ್ಥಿಗಳು ಮತ್ತು ವಿದ್ವಾಂಸರು ಭಾಗವಹಿಸಿದ್ದರು.

ಋ) ***ಶಾಸನಶಾಸ್ತ್ರದ ಕುರಿತು ರಾಜ್ಯ ಮಟ್ಟದ ಕಾರ್ಯಾಗಾರ’*** ವನ್ನು ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ಇವರ ಸಹಯೋಗದೊಂದಿಗೆ ದಿನಾಂಕ 14–03–2019 ಮತ್ತು 15–03–2019 ರಂದು ಕರ್ನಾಟಕ ವಿಶ್ವವಿದ್ಯಾಲಯ ಆವರಣದಲ್ಲಿ ಏರ್ಪಡಿಸಲಾಗಿತ್ತು. ಈ ಕಾರ್ಯಾಗಾರದಲ್ಲಿ ಸಂಶೋಧನಾರ್ಥಿಗಳಿಗೆ ಶಾಸನಶಾಸ್ತ್ರದ ಕುರಿತು ತರಬೇತಿಯನ್ನು ನೀಡಲಾಯಿತು.

**9. ಇಲಾಖಾ ವತಿಯಿಂದ 2018 ಮತ್ತು 2019 ನೇ ಸಾಲಿನಲ್ಲಿ ಹೊರತರಲಾದ ಪ್ರಕಟಣಾ ಪುಸ್ತಕಗಳು:**

01. Archaeological Excavations at TALAKAD 2006-2010, Volume-II.
02. Buddhist Art and Culture in Karnataka - India.

**10. ಇಲಾಖಾವತಿಯಿಂದ ಲೋಕಾರ್ಪಣೆ ಮಾಡಲಾದ ಪ್ರಕಟಣಾ ಪುಸ್ತಕಗಳು:**

ಅ) ಚಾಮರಾಜನಗರ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ

ಆ) ಕರ್ನಾಟಕದ ವಸ್ತುಸಂಗ್ರಹಾಲಯಗಳಲ್ಲಿನ ಚಿತ್ರಕಲೆ.

**11. ಪ್ರಾಚ್ಯವಸ್ತುಗಳ ಸಂಶೋಧನೆಯ ವಿವರ:**

ದಿನಾಂಕ 26.02.2019ರಂದು ಸೋಮವಾರಪೇಟೆ ತಾಲ್ಲೂಕು ದುಬಾರೆಯ ಕಾವೇರಿ ನದಿಯಿಂದ ಪ್ರಾಚೀನ ಕಾಲದ ವೀರಗಲ್ಲನ್ನು ಮಡಿಕೇರಿ ವಸ್ತುಸಂಗ್ರಹಾಲಯಕ್ಕೆ ಸ್ಥಳಾಂತರಿಸಲಾಗಿದೆ.

12. **ಉತ್ಖನನ ಕಾರ್ಯದ ವರದಿ:**

ಅ) ಮೈಸೂರಿನ ಟಿ.ನರಸೀಪುರ ತಾಲ್ಲೂಕಿನ ತಲಕಾಡಿನಲ್ಲಿ 2018–19ನೇ ಸಾಲಿನಲ್ಲಿ ಪ್ರೊ.ಎಂ.ಎನ್.ಕೃಷ್ಣಮೂರ್ತಿ, ನಿವೃತ್ತ ಪ್ರಾಧ್ಯಾಪಕರು (ಪುರಾತತ್ವ ವಿಭಾಗ) ಮೈಸೂರು ವಿಶ್ವವಿದ್ಯಾಲಯ ಹಾಗೂ ಪ್ರಧಾನ ಸಲಹೆಗಾರರು ಮತ್ತು ಇಲಾಖಾ ನಿರ್ದೇಶಕರು (ಪುರಾತತ್ವ), ಇವರುಗಳ ಮಾರ್ಗದರ್ಶನದಲ್ಲಿ ತಲಕಾಡಿನಲ್ಲಿ ಉತ್ಖನನ ಕಾರ್ಯವನ್ನು ಕೈಗೊಂಡಿದ್ದು ಸದರಿ ಉತ್ಖನನ ಸ್ಥಳದಲ್ಲಿ ಪ್ರಮುಖ ಪ್ರಾಚ್ಯ ಅವಶೇಷಗಳು ದೊರೆತಿರುತ್ತವೆ.

ಆ) ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲ್ಲೂಕಿನ ಹಂಪಿ (ಕಮಲಾಪುರ) ಇಲ್ಲಿ 2018–19ನೇ ಸಾಲಿನಲ್ಲಿ ಡಾ.ಸಿ.ಎಸ್.ವಾಸುದೇವನ್, ಪ್ರಾಧ್ಯಾಪಕರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ, ಡಾ. ಎಸ್.ಕೆ.ವಾಸುದೇವ, ಉಪನಿರ್ದೇಶಕರು (ಪ್ರ), ಮತ್ತು ಮಂಜಾನಾಯ್ಕ ಆರ್, ಪುರಾತತ್ವ ಸಹಾಯಕರು ಇವರುಗಳ ಸಮ್ಮುಖದಲ್ಲಿ ಪ್ರತಿಷ್ಠಿತ ವ್ಯಕ್ತಿಗಳ ಅರಮನೆ ಆವರಣ (ನೋಬಲ್ ಮೆನ್) ಇಲ್ಲಿ ಉತ್ಖನನ ಕಾರ್ಯವನ್ನು ಕೈಗೊಳ್ಳಲಾಗಿದ್ದು ಉತ್ಖನನ ಕಾರ್ಯವು ಪ್ರಗತಿಯಲ್ಲಿದೆ.

13. **"ಪಾರಂಪರಿಕ ಉಡುಗೆಯಲ್ಲಿ ಪಾರಂಪರಿಕ ನಡಿಗೆ / "ಪಾರಂಪರಿಕ ಸೈಕಲ್ ಸವಾರಿ" / "ದಂಪತಿಗಳಿಗಾಗಿ ಪಾರಂಪರಿಕ ಟಾಂಗಾ ಸವಾರಿ"**

- ಮೈಸೂರು ದಸರಾ ಮಹೋತ್ಸವ 2018ರ ಅಂಗವಾಗಿ ಮೈಸೂರಿನಲ್ಲಿರುವ ಮೂರ್ತ ಪರಂಪರೆಯ ಪ್ರತೀಕಗಳಾದ, ಐತಿಹಾಸಿಕ ಕಲಾಕೌಶಲ್ಯದಿಂದ ಕೂಡಿದ ಪಾರಂಪರಿಕ ಕಟ್ಟಡಗಳ ಬಗ್ಗೆ ಮೈಸೂರಿನ ಪ್ರವಾಸಿಗರು, ಸಾರ್ವಜನಿಕರು ಹಾಗೂ ವಿವಿಧ ಕಾಲೇಜು ವಿದ್ಯಾರ್ಥಿಗಳಿಗೆ ಅರಿವು ಮೂಡಿಸುವ ಸಲುವಾಗಿ ದಿನಾಂಕ:11.10.2018ರಂದು **"ಪಾರಂಪರಿಕ ಉಡುಗೆಯಲ್ಲಿ ಪಾರಂಪರಿಕ ನಡಿಗೆ",**ದಿನಾಂಕ:12.10.2018ರಂದು **"ಪಾರಂಪರಿಕ ಸೈಕಲ್ ಸವಾರಿ"** ಮತ್ತು ದಿನಾಂಕ:13.10.2018ರಂದು **"ದಂಪತಿಗಳಿಗಾಗಿ ಪಾರಂಪರಿಕ ಟಾಂಗಾ ಸವಾರಿ"** ಮೂಲಕ ಪಾರಂಪರಿಕ ಕಟ್ಟಡಗಳ ವೀಕ್ಷಣೆಯನ್ನು ಇಲಾಖೆಯವತಿಯಿಂದ ಆಯೋಜಿಸಲಾಗಿತ್ತು. ಈ ಮೂರು ದಿನಗಳ ಕಾಲ ನಡೆದ ಕಾರ್ಯಕ್ರಮದಲ್ಲಿ 700ಕ್ಕೂ ಹೆಚ್ಚು ಸಾರ್ವಜನಿಕರು ಭಾಗವಹಿಸಿದ್ದು ವಿಶೇಷತೆಯಾಗಿದೆ.

- ಪ್ರಸಕ್ತ ಆರ್ಥಿಕ ಸಾಲಿನ ದಸರಾ ಮಹೋತ್ಸವವನ್ನು ಸೆಲ್ಫಿ ವಿತ್ ಹೆರಿಟೇಜ್ ಬಿಲ್ಡಿಂಗ್ ಎಂಬ ವಿನೂತನ ಸ್ಪರ್ಧೆ ಆಯೋಜಿಸುವ ಮೂಲಕ ಪಾರಂಪರಿಕ ಕಟ್ಟಡಗಳ ಪರಿಚಯವನ್ನು ಇಂದಿನ ಯುವ ಜನತೆಯಿಂದ ಹಿಡಿದು ಹಿಂದಿನ ವಯಸ್ಕರವರೆಗೂ ಮಾಡಿಸಲಾಗಿರುತ್ತದೆ. ನುರಿತ ತೀರ್ಪುಗಾರರು ಆಯ್ಕೆ ಮಾಡಿದ ಮೂರು ಉತ್ತಮ ಸೆಲ್ಫಿ ಫೋಟೋಗಳಿಗೆ (ಪಥಮ ಬಹುಮಾನ–ರೂ.3000/– ದ್ವಿತೀಯ ಬಹುಮಾನ–ರೂ.2000/– ಮತ್ತು ತೃತೀಯ ಬಹುಮಾನ–ರೂ.1000/–)ಗಳ ನಗದು ಬಹುಮಾನ ನೀಡಲಾಗಿರುತ್ತದೆ.

| ಕ್ರ.ಸಂ | ಸ್ಪರ್ಧಿಯ ಹೆಸರು | ಪಡೆದ ಸ್ಥಾನ | ಪಾ.ಕಟ್ಟಡದೊಂದಿಗೆ ಸೆಲ್ಫಿ |
|---|---|---|---|
| 1 | ಮೇಘನಾ ಜೆ ಬನುಮಯ್ಯ | ಪ್ರಥಮ |  |

| | | | |
|---|---|---|---|
| 2 | ಕಾಳೀಹುಂಡಿ ಶಿವಕುಮಾರ್ | ದ್ವಿತೀಯ |  |
| 3 | ಸವಿತ ಬಿ.ಆರ್ | ತೃತೀಯ |  |

- 2018–19ನೇ ಸಾಲಿನಲ್ಲಿ ಮೈಸೂರಿನ ಪಾರಂಪರಿಕ ಕಟ್ಟಡಗಳ ಹಿನ್ನೆಲೆ, ಪ್ರಾಮುಖ್ಯತೆ ಹಾಗೂ ವಾಸ್ತುಶಿಲ್ಪ ಶೈಲಿಯ ಬಗ್ಗೆ ಅರಿವು ಮೂಡಿಸಲು ಆಡಳಿತ ತರಬೇತಿ ಸಂಸ್ಥೆ/ ರಾಜ್ಯ ನಗರಾಭಿವೃದ್ಧಿ ಸಂಸ್ಥೆ/ ಅಂಚೆ ತರಬೇತಿ ಸಂಸ್ಥೆ/ ಪೊಲೀಸ್ ಅಕಾಡೆಮಿಗಳಲ್ಲಿ ತರಬೇತಿಯಲ್ಲಿ ಭಾಗವಹಿಸಿದ ಪ್ರಶಿಕ್ಷಣಾರ್ಥಿಗಳು/ ಬ್ಯಾಂಕ್ ಅಧಿಕಾರಿಗಳು/ ನಗರಪಾಲಿಕೆ ಸದಸ್ಯರು/ ಪ್ರೌಢಶಾಲೆ ಮತ್ತು ಕಾಲೇಜು ವಿದ್ಯಾರ್ಥಿಗಳು/ವಿವಿಧ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದೇಶಿ ವಿದ್ಯಾರ್ಥಿಗಳು/ ಪ್ರವಾಸಿಗರು/ ವಿದೇಶಿ ಪ್ರವಾಸಿಗರು ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳೂ ಸೇರಿದಂತೆ 20 ಪಾರಂಪರಿಕ ನಡಿಗೆ ಕಾರ್ಯಕ್ರಮವನ್ನು ಇಲಾಖೆವತಿಯಿಂದ ಆಯೋಜಿಸಲಾಗಿದೆ.

  - **ಪಾರಂಪರಿಕ ಉಡುಗೆಯಲ್ಲಿ ಪಾರಂಪರಿಕ ನಡಿಗೆ –1**
  - **ಪಾರಂಪರಿಕ ಸೈಕಲ್ ಸವಾರಿ –1**
  - **ದಂಪತಿಗಳಿಗಾಗಿ ಪಾರಂಪರಿಕ ಟಾಂಗಾ ಸವಾರಿ –1**
  - **ಪಾರಂಪರಿಕ ನಡಿಗೆ –20**

✓ **ಒಟ್ಟಾರೆ 23 ಕಾರ್ಯಕ್ರಮಗಳನ್ನು ಇಲಾಖೆವತಿಯಿಂದ ಆಯೋಜಿಸಲಾಗಿದೆ.**

**14. ಪರಂಪರೆ ಕೂಟ:**

- ನಾಡಿನ ಮೂರ್ತ, ಅಮೂರ್ತ ಮತ್ತು ನೈಸರ್ಗಿಕ ಪರಂಪರೆಯ ವಿವಿಧ ಮಜಲುಗಳ ಬಗ್ಗೆ ಕಾಲೇಜು ವಿದ್ಯಾರ್ಥಿಗಳಿಗೆ ಮನವರಿಕೆ ಮಾಡುವ ಉದ್ದೇಶದಿಂದ 2018–19ನೇ ಸಾಲಿನಲ್ಲಿ ರಾಜ್ಯದ 20 ಸರ್ಕಾರಿ ಕಾಲೇಜುಗಳು ಹಾಗೂ 26 ಅನುದಾನಿತ ಕಾಲೇಜುಗಳಲ್ಲಿ **(ಒಟ್ಟು 46 ಕಾಲೇಜುಗಳು) ರಚಿತವಾಗಿರುವ ಪರಂಪರೆ ಕೂಟಗಳಿಗೆ ರೂ.9,85,000=00ಗಳ** ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

**15. ಪ್ರಾಚ್ಯ ಪ್ರಜ್ಞೆ:**

2014–15ರಲ್ಲಿ ಆಯವ್ಯಯ ಭಾಷಣದ ಕಂಡಿಕೆ (253)ರಲ್ಲಿ ಘೋಷಣೆಯಂತೆ ರಾಜ್ಯವು ಹಲವಾರು ಪ್ರಾಚೀನ ರಾಜಮನೆತನಗಳ ಆಳ್ವಿಕೆಗಳಿಗೆ ಒಳಪಟ್ಟಿದ್ದು ಈ ರಾಜಮನೆತನಗಳು ತಮ್ಮ ಆಡಳಿತಾವಧಿಯಲ್ಲಿ ಹಲವಾರು ಪಳೆಯುಳಿಕೆಗಳನ್ನು ಸ್ಮಾರಕಗಳ ರೂಪದಲ್ಲಿ ಬಿಟ್ಟುಹೋಗಿವೆ. ಇಂತಹ ಪ್ರಾಚೀನ ಸ್ಮಾರಕಗಳು, ಕಲೆ, ಸಂಸ್ಕೃತಿ, ಸಾಹಿತ್ಯ ಮತ್ತು ವಾಸ್ತುಶಿಲ್ಪ ಶೈಲಿಗಳನ್ನು ಪ್ರೌಢಶಾಲೆ ವಿದ್ಯಾರ್ಥಿಗಳಿಗೆ ಪರಿಚಯಿಸುವ ಸಲುವಾಗಿ ಪ್ರಾಚ್ಯಪ್ರಜ್ಞೆ ಎಂಬ ನೂತನ ಕಾರ್ಯಕ್ರಮವನ್ನು ಸಾರ್ವಜನಿಕ ಶಿಕ್ಷಣ ಇಲಾಖೆ, ಜಿಲ್ಲಾಡಳಿತ, ಕನ್ನಡ ಸಂಸ್ಕೃತಿ, ವಾರ್ತಾ ಹಾಗೂ ಸಾರ್ವಜನಿಕ ಸಂಪರ್ಕ ಇಲಾಖೆ, ಸ್ಥಳೀಯ ನಗರ ಸಭೆ, ಪುರಸಭೆ, ತಾಲ್ಲೂಕು ಆಡಳಿತದ ಸಹಯೋಗದೊಂದಿಗೆ ಇಲಾಖೆಯು ಪ್ರಾಚ್ಯಪ್ರಜ್ಞೆ ಕಾರ್ಯಕ್ರಮವನ್ನು 2014–15ನೇ ಸಾಲಿನಿಂದ ಅನುಷ್ಠಾನಗೊಳಿಸಲಾಗುತ್ತಿದೆ.

ಇದು ನಿರಂತರ ಕಾರ್ಯಕ್ರಮವಾಗಿದ್ದು, 2018–19ನೇ ಸಾಲಿನಲ್ಲಿಯೂ ಸಹ ಮುಂದುವರೆಸಲಾಗಿದೆ. 2018–19ನೇ ಸಾಲಿನಲ್ಲಿ ಈ ಕಾರ್ಯಕ್ರಮಕ್ಕೆ ರೂ.29,50,000=00ಗಳನ್ನು 23 ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ಇವರುಗಳಿಗೆ ಆಯುಕ್ತಾಲಯದ ವತಿಯಿಂದ ಅನುದಾನ ಹಂಚಿಕೆ ಮಾಡಲಾಗಿರುತ್ತದೆ.

**16. ಪಾರಂಪರಿಕ ಕಲಾ ಶಿಬಿರ:**

- 2018–19ನೇ ಆರ್ಥಿಕ ಸಾಲಿನಲ್ಲಿ ಪಾರಂಪರಿಕ ಕಲಾ ಶಿಬಿರ ಹಮ್ಮಿಕೊಳ್ಳಲು ಸಹಾಯಕ ಕ್ಯೂರೇಟರ್, ಸರ್ಕಾರಿ ವಸ್ತುಸಂಗ್ರಹಾಲಯ, ಕಿತ್ತೂರು ಇವರಿಗೆ ರೂ.5.00ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದ್ದು, ಸದರಿ ಅನುದಾನವನ್ನು ಸದ್ಬಳಕೆ ಮಾಡಿಕೊಂಡು ದಿನಾಂಕ: 07.03.2019 ರಿಂದ 11.03.2019ರವರೆಗೆ ಕಿತ್ತೂರು ರಾಣಿಚೆನ್ನಮ್ಮ ಕೋಟೆ ಆವರಣ, ಕಿತ್ತೂರಿನಲ್ಲಿ ಅಮೂರ್ತ ಪರಂಪರೆ ಕುರಿತ ಪಾರಂಪರಿಕ ಕಲಾಶಿಬಿರವನ್ನು ಆಯೋಜಿಸಲಾಗಿತ್ತು. ಈ ಶಿಬಿರದಲ್ಲಿ 17 ಹಿರಿಯರು ಕಲಾವಿದರು ಹಾಗೂ 3 ಕಿರಿಯ ಕಲಾವಿದರು ಭಾಗವಹಿಸಿರುತ್ತಾರೆ.

**17. ವಿಚಾರ ಸಂಕಿರಣ:**

- ರಾಜ್ಯದಲ್ಲಿರುವ ಪ್ರಾಚೀನ ಸ್ಮಾರಕಗಳು, ದೇವಾಲಯಗಳು; ದೇವಾಲಯಗಳಲ್ಲಿರುವ ಕಲಾ ಶೈಲಿ, ವೈಭವತೆ, ವರ್ಣಚಿತ್ರ, ಚಿತ್ರಕಲಾ ಕೌಶಲ್ಯ ಮತ್ತು ಪಾರಂಪರಿಕ ವಿಭಾಗಗಳಾದ ಮೂರ್ತ, ಅಮೂರ್ತ ಮತ್ತು ನೈಸರ್ಗಿಕ ಪರಂಪರೆಯ ಬಗ್ಗೆ ಮತ್ತು ಅವುಗಳನ್ನು ಉಳಿಸಿ, ಬೆಳೆಸಿ, ಸಂರಕ್ಷಿಸಿ ಮುಂದಿನ ಪೀಳಿಗೆಗೆ ಹಸ್ತಾಂತರಿಸುವುದಲ್ಲದೇ ಈ ವಿಚಾರ ಸಂಕಿರಣದಿಂದ ಸಂಶೋಧನಾತ್ಮಕ ವಿಚಾರ ವಿನಿಮಯವು ಪರಿಣಿತ ಸಂಶೋಧಕರು ಹಾಗೂ ವಿದ್ಯಾರ್ಥಿಗಳ ನಡುವೆ ಸಂಪರ್ಕ ಸೇತುವೆ ಕಲ್ಪಿಸಲು ಸಹಕಾರಿಯಾಗಿರುತ್ತದೆ. ವಿಚಾರ ಸಂಕಿರಣವನ್ನು ಈ ಕೆಳಕಂಡ ಕಾಲೇಜುಗಳಲ್ಲಿ ಆಯೋಜಿಸಲಾಗಿತ್ತು.

| | ಅಧಿಕಾರಿಗಳು | ಕಾಲೇಜು | ಕಾರ್ಯಕ್ರಮ |
|---|---|---|---|
| 1 | ಉಪ ನಿರ್ದೇಶಕರು(ಪ್ರ) ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಬಯಲು ರಂಗಮಂದಿರ ಹತ್ತಿರ ಕಾಲೇಜು ರಸ್ತೆ, ಧಾರವಾಡ. | ಪ್ರಾಚಾರ್ಯರು<br>ಶ್ರೀ ಶಿವಯೋಗಿ ಮುರುಘೇಂದ್ರ ಸ್ವಾಮೀಜಿ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಅಥಣಿ. | **"ಕರ್ನಾಟಕ ನಾಟಕ ಪರಂಪರೆ" ಕುರಿತು ಎರಡು ದಿನದ ರಾಜ್ಯ ಮಟ್ಟದ ವಿಚಾರ ಸಂಕಿರಣ.** |
| 2 | | ಪ್ರಾಚಾರ್ಯರು,<br>ವಿಜಯ ಮಹಾಂತೇಶ ಕೃಪಾಪೋಷಿತ ಎಸ್.ಆರ್.ವಸ್ತ್ರದ ಕಲಾ, ವಿಜ್ಞಾನ ಹಾಗೂ ವಿಜಯ ಶಂಕರಪ್ಪ ಬೆಳ್ಳಿಹಾಳ ವಾಣಿಜ್ಯ ಮಹಾವಿದ್ಯಾಲಯ, ಹುನಗುಂದ–587118, ಬಾಗಲಕೋಟೆ | **"ಐತಿಹಾಸಿಕ ಸ್ಮಾರಕಗಳ ವೈವಿಧ್ಯತೆ ಮತ್ತು ಸಂರಕ್ಷಣೆ"ಗಳ ಕುರಿತು ಎರಡು ದಿನಗಳ ರಾಷ್ಟ್ರ ಮಟ್ಟದ ವಿಚಾರ ಸಂಕಿರಣ.** |
| 3 | ಸಹಾಯಕ ನಿರ್ದೇಶಕರು ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಶಿವಪ್ಪನಾಯಕನ ಅರಮನೆ ಆವರಣ, ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಹತ್ತಿರ, ಶಿವಮೊಗ್ಗ–577202 | ಅಧ್ಯಕ್ಷರು,<br>ಸರ್.ಎಂ.ವಿ ಸರ್ಕಾರಿ ಕಲಾ ಮತ್ತು ವಾಣಿಜ್ಯ ಕಾಲೇಜು, ನ್ಯೂಟೌನ್, ಭದ್ರಾವತಿ ತಾಲ್ಲೋಕು, ಶಿವಮೊಗ್ಗ ಜಿಲ್ಲೆ. | **"ಅಮೂರ್ತ ಪರಂಪರೆ"ಗಳ ಕುರಿತು ಎರಡು ದಿನಗಳ ವಿಚಾರ ಸಂಕಿರಣ.** |

| | | | |
|---|---|---|---|
| | ಉಪ ನಿರ್ದೇಶಕರು(ಪರಂಪರೆ) ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು | ಪ್ರಾಂಶುಪಾಲರು ಪಿ.ಆರ್.ಎಂ, ವಿಜಯಾ ಪ್ರಥಮ ದರ್ಜೆ ಕಾಲೇಜು,ಗೋಪಾಲಪುರ ರಸ್ತೆ ತಿ.ನರಸೀಪುರ–571121, ಮೈಸೂರು ಜಿಲ್ಲೆ. | **"ಹೊಯ್ಸಳರ ಕಲೆ ಮತ್ತು ವಾಸ್ತುಶಿಲ್ಪ"ಗಳ ಕುರಿತು ಎರಡು ದಿನಗಳ ರಾಜ್ಯ ಮಟ್ಟದ ವಿಚಾರ ಸಂಕಿರಣ.** |
| 4 | ಕ್ಯೂರೇಟರ್ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಬಸವಕಲ್ಯಾಣ. | ಪ್ರಾಂಶುಪಾಲರು ಅಕ್ಕಮಹಾದೇವಿ ಮಹಿಳಾ ಮಹಾವಿದ್ಯಾಲಯ, ಬೀದರ–585401. | **"ಬೀದರ ಜಿಲ್ಲೆಯ ವಾಸ್ತುಶಿಲ್ಪ ಶೈಲಿ"ಗಳ ಕುರಿತು ಎರಡು ದಿನಗಳ ರಾಷ್ಟ್ರ ಮಟ್ಟದ ವಿಚಾರ ಸಂಕಿರಣ.** |

**18. ಎನ್.ಎಸ್.ಎಸ್ ಘಟಕಗಳ ಮೂಲಕ ಸ್ಮಾರಕಗಳ ಸ್ವಚ್ಛತಾ ಕಾರ್ಯಕ್ರಮ:**

- ಪರಂಪರೆ ಕಟ್ಟಡಗಳ ಸ್ವಚ್ಛತೆ ಹಾಗೂ ಪ್ರಚಾರಣೆ ಕೈಗೊಳ್ಳಲು (1) ಸಂಯೋಜನಾಧಿಕಾರಿ, ಗುಲ್ಬರ್ಗಾ ವಿಶ್ವವಿದ್ಯಾನಿಲಯ, ಕಲಬುರಗಿ (2) ಸಂಯೋಜನಾಧಿಕಾರಿ ರಾಣಿಚೆನ್ನಮ್ಮ ವಿಶ್ವವಿದ್ಯಾನಿಲಯ, ಬೆಳಗಾವಿ (3) ಸಂಯೋಜನಾಧಿಕಾರಿ ಕನ್ನಡ ವಿಶ್ವವಿದ್ಯಾನಿಲಯ, ವಿದ್ಯಾರಣ್ಯ, ಹಂಪಿ ಈ ಮೂರು ವಿಶ್ವವಿದ್ಯಾನಿಲಯಗಳ ಮೂಲಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು.

**19. ವಿಶ್ವ ಪರಂಪರೆ ದಿನಾಚರಣೆ:**

- ಮಾನ್ಯ ಇಲಾಖಾ ಆಯುಕ್ತರ ಅಧ್ಯಕ್ಷತೆಯಲ್ಲಿ ದಿನಾಂಕ 18.04.2018ರಂದು ಸಸಿಗೆ ನೀರೆರೆಯುವ ಮೂಲಕ ಅಧಿಕಾರಿ/ ಸಿಬ್ಬಂದಿಗಳೊಂದಿಗೆ ವಿಶ್ವ ಪರಂಪರೆ ದಿನಾಚರಣೆಯನ್ನು ಆಚರಿಸಲಾಗಿದೆ.

**20. ವಿಶ್ವ ಪರಂಪರೆ ಸಪ್ತಾಹ:**

- ವಿಶ್ವ ಪರಂಪರೆ ಸಪ್ತಾಹದ ಅಂಗವಾಗಿ ಬೆಂಗಳೂರಿನಲ್ಲಿ ಪಾರಂಪರಿಕ ಕಟ್ಟಡಗಳ ಛಾಯಾಚಿತ್ರಗಳ ಪ್ರದರ್ಶನ, ಬಳ್ಳಿಗಾವಿಯಲ್ಲಿ ಪಾರಂಪರಿಕ ಆಟಗಳು ಮತ್ತು ರಂಗೋಲಿ ಸ್ಪರ್ಧೆ, ತಲಕಾಡಿನಲ್ಲಿ ಪಾರಂಪರಿಕ ನಡಿಗೆ, ಗುಲ್ಬರ್ಗಾದಲ್ಲಿ ಮ್ಯೂಸಿಯಂ & ಹೆರಿಟೇಜ್ ಬಿಲ್ಡಿಂಗ್ಸ್ ಆನ್ ವೀಲ್ಸ್, ಲಕ್ಕುಂಡಿಯಲ್ಲಿ ಪಾರಂಪರಿಕ ನಡಿಗೆ ಹಾಗೂ ಕಿತ್ತೂರಿನಲ್ಲಿ ವಿಚಾರ ಸಂಕಿರಣ, ಶಿವಮೊಗ್ಗದಲ್ಲಿ ರಂಗೋಲಿ ಸ್ಪರ್ಧೆ, ಪಾರಂಪರಿಕ ಆಟಗಳ ಸ್ಪರ್ಧೆ, "ಅಮೂರ್ತ ಪರಂಪರೆಗಳ", ಕುರಿತು ವಿಚಾರ ಸಂಕಿರಣ ಹಾಗೂ ಪ್ರಾಚ್ಯ ಪ್ರಜ್ಞೆ ಸ್ಪರ್ಧೆ ಆಯೋಜಿಸುವ ಮೂಲಕ ಪರಂಪರೆ ಸಪ್ತಾಹ ಕಾರ್ಯಕ್ರಮವನ್ನು ಆಚರಿಸಲಾಗಿದೆ.

**21. ಪಾರಂಪರಿಕ ಸಮಿತಿ:**

- 2018–19ನೇ ಸಾಲಿನಲ್ಲಿ ಪಾರಂಪರಿಕ ಪ್ರದೇಶದ ಅಭಿವೃದ್ಧಿ ಮತ್ತು ತಜ್ಞರ ಸಮಿತಿಗಳ ಮುಂದುವರೆದ ವಿವರಗಳು.

| **ಕ್ರ.ಸಂ** | **ಸಮಿತಿಯ ವಿವರ** | **ಸರ್ಕಾರಿ ಆದೇಶ ಸಂಖ್ಯೆ** | **ಅವಧಿ** | |
|---|---|---|---|---|
| | | | **ಯಿಂದ** | **ಗೆ** |
| 01 | ಮೈಸೂರು ಪಾರಂಪರಿಕ ಪ್ರದೇಶದ ಅಭಿವೃದ್ಧಿ ಮತ್ತು ತಜ್ಞರ ಸಮಿತಿ | ಸರ್ಕಾರಿ ಆದೇಶ ಸಂಖ್ಯೆ: ಕಸಂವಾ 150 ಕೆಎಂಯು 2017 ಬೆಂಗಳೂರು ದಿನಾಂಕ:13.09.2017 | 01.04.2017 | 31.03.2022 |

| | | | | |
|---|---|---|---|---|
| 02 | ಶ್ರೀರಂಗಪಟ್ಟಣ ಪಾರಂಪರಿಕ ಪ್ರದೇಶದ ಅಭಿವೃದ್ಧಿ ಮತ್ತು ತಜ್ಞರ ಸಮಿತಿ | ಸರ್ಕಾರಿ ಆದೇಶ ಸಂಖ್ಯೆ: ಕಸಂವಾ 37 ಕೆಎಂಯು 2016 ಬೆಂಗಳೂರು ದಿನಾಂಕ:26.04.2018.<br>ತಿದ್ದುಪಡಿ ಆದೇಶ ಸಂಖ್ಯೆ: ಕಸಂವಾ 89 ಕೆಎಂಯು 2018, ಬೆಂಗಳೂರು, ದಿನಾಂಕ:19.07.2018. | 01.04.2018 | 31.03.2020 |
| 03 | ಗುಲ್ಬರ್ಗಾ ಪಾರಂಪರಿಕ ಪ್ರದೇಶದ ಅಭಿವೃದ್ಧಿ ಮತ್ತು ತಜ್ಞರ ಸಮಿತಿ | ಸರ್ಕಾರಿ ಆದೇಶ ಸಂಖ್ಯೆ: ಕಸಂವಾಪ್ರ 390 ಕೆಎಂಯು 2012, ಬೆಂಗಳೂರು, ದಿನಾಂಕ:06.04.2013 | ದಿ:22.01.2013 ರಿಂದ ಮುಂದಿನ ಎರಡು ವರ್ಷಗಳ ಅವಧಿ | |
| 04 | ಬೀದರ್ ಪಾರಂಪರಿಕ ಪ್ರದೇಶದ ಅಭಿವೃದ್ಧಿ ಮತ್ತು ತಜ್ಞರ ಸಮಿತಿ | ಸರ್ಕಾರಿ ಆದೇಶ ಸಂಖ್ಯೆ: ಕಸಂವಾ 238 ಕೆಎಂಯು 2016, ಬೆಂಗಳೂರು, ದಿನಾಂಕ:01.03.2017 | 10.12.2016 ರಿಂದ ಮುಂದಿನ 2 ವರ್ಷಗಳ ಅವಧಿ | |
| 05 | ಕಿತ್ತೂರು ಪಾರಂಪರಿಕ ಪ್ರದೇಶದ ಅಭಿವೃದ್ಧಿ ಮತ್ತು ತಜ್ಞರ ಸಮಿತಿ | ಸರ್ಕಾರಿ ಆದೇಶ ಸಂಖ್ಯೆ: ಕಸಂವಾ 18 ಕೆಎಂಯು 2015, ಬೆಂಗಳೂರು, ದಿನಾಂಕ:03.09.2015 | ದಿ:09.12.2014 ರಿಂದ ಮುಂದಿನ ಎರಡು ವರ್ಷಗಳ ಅವಧಿ | |
| 06 | ಬಿಜಾಪುರ (ವಿಜಯಪುರ) ಪಾರಂಪರಿಕ ಪ್ರದೇಶದ ಅಭಿವೃದ್ಧಿ ಮತ್ತು ತಜ್ಞರ ಸಮಿತಿ | ಸರ್ಕಾರಿ ಆದೇಶ ಸಂಖ್ಯೆ: ಕಸಂವಾ 115 ಕೆಎಂಯು 2016, ಬೆಂಗಳೂರು, ದಿನಾಂಕ:26.04.2017.<br>ತಿದ್ದುಪಡಿ ಆದೇಶ ಸಂಖ್ಯೆ: ಕಸಂವಾ 38 ಕೆಎಂಯು 2018, ಬೆಂಗಳೂರು, ದಿನಾಂಕ: 19.07.2018 | 02.04.2018 | 01.04.2020 |
| 07 | ಬೆಂಗಳೂರು ಜಿಲ್ಲೆ, ಬೆಂಗಳೂರು ನಗರವನ್ನು ಪರಂಪರಾ ಪ್ರದೇಶವೆಂದು ಘೋಷಣೆ ಮಾಡಿರುವ ನಿಟ್ಟಿನಲ್ಲಿ ತಜ್ಞರ ಸಮಿತಿಯನ್ನು ರಚಿಸುವ ಬಗ್ಗೆ | ತಿದ್ದುಪಡಿ ಆದೇಶ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. | | |

**22. ಪರಂಪರೆ ಮಾಲಿಕೆಗಳ ಮುದ್ರಣ**

- ಮೈಸೂರು ವರ್ಣಚಿತ್ರ ಕಲೆಯ (ಸಾಂಪ್ರದಾಯಿಕ ಚಿತ್ರಕಲೆ) ಪುಸ್ತಕದ ಒಂದು ಸಾವಿರ ಪ್ರತಿಗಳನ್ನು ಮರು ಮುದ್ರಣ ಮಾಡಿಸಲಾಗಿದೆ.
- ಕಿತ್ತೂರು ಕನ್ನಡ ಮತ್ತು ಆಂಗ್ಲ ಅವತರಣಿಕೆಯ ಒಂದು ಸಾವಿರ ಪ್ರತಿಗಳು ಹಾಗೂ ಶ್ರೀರಂಗಪಟ್ಟಣ ಕನ್ನಡ ಮತ್ತು ಆಂಗ್ಲ ಅವತರಣಿಕೆಯ ಒಂದು ಸಾವಿರ ಪ್ರತಿಗಳನ್ನು ಮರು ಮುದ್ರಣ ಮಾಡಿಸಲಾಗಿದೆ.

**23 ಸಾರ್ವಜನಿಕ ಕುಂದು ಕೊರತೆಗಳು:**

- ಐತಿಹಾಸಿಕ ಸ್ಮಾರಕಗಳ ಸಂರಕ್ಷಣೆ ಕುರಿತಂತೆ ಸಾರ್ವಜನಿಕರಿಂದ ಹಾಗೂ ಸಂಘ ಸಂಸ್ಥೆಗಳಿಂದ ಸ್ಮಾರಕಗಳ ಸಂರಕ್ಷಣೆಗಾಗಿ ಮನವಿಗಳು ಬರುತ್ತಿದ್ದು ಅವುಗಳನ್ನು ಆದ್ಯತೆಯ

ಮೇರೆಗೆ ಇಲಾಖೆಯಲ್ಲಿ ಲಭ್ಯವಿರುವ ಅನುದಾನವನ್ನು ಗಮನದಲ್ಲಿರಿಸಿಕೊಂಡು ಸಂರಕ್ಷಣಾ ಕಾರ್ಯವನ್ನು ನಿರ್ವಹಿಸಲಾಗುತ್ತಿದೆ.

## 24. ಮಾಹಿತಿ ಹಕ್ಕು ಅಧಿನಿಯಮ:

**2018-19ನೇ ಸಾಲಿನಲ್ಲಿ ಮಾಹಿತಿ ಹಕ್ಕು ಅಧಿನಿಯಮದಡಿ ಸ್ವೀಕೃತವಾದ ಅರ್ಜಿಗಳ ವಿವರ**

| ವರ್ಷ | ನೇರವಾಗಿ ಸ್ವೀಕೃತವಾದ ಅರ್ಜಿಗಳು | ಸರ್ಕಾರದಿಂದ ವರ್ಗಾಹಿಸಿರುವ ಅರ್ಜಿಗಳು | ಅಧೀನ ಕಛೇರಿಯಿಂದ ವರ್ಗಾಹಿಸಿದ ಅರ್ಜಿಗಳು | ಅಧೀನ ಕಛೇರಿಯಲ್ಲಿ ನೇರವಾಗಿ ಮಾಹಿತಿ ನೀಡಿರುವ ಪತ್ರದ ಪ್ರತಿಗಳು | ಒಟ್ಟು ಸ್ವೀಕೃತವಾದ ಅರ್ಜಿಗಳು |
|---|---|---|---|---|---|
| ಏಪ್ರಿಲ್ 2018 ರಿಂದ ಮಾರ್ಚ್ 2019 | 49 | 7 | 3 | 6 | **65** |

## 25 ಸಂರಕ್ಷಣಾ ಕಾಮಗಾರಿ :

ಇಲಾಖೆಯ ವತಿಯಿಂದ ವಿವಿಧ ಲೆಕ್ಕಶೀರ್ಷಿಕೆಯಡಿ ಸ್ಮಾರಕಗಳ ಸಂರಕ್ಷಣೆ ವಿವಿಧ ಅಭಿವೃದ್ಧಿ ಕಾಮಗಾರಿಗಳ ಕ್ರಿಯಾಯೋಜನೆಗೆ ಸರ್ಕಾರದಿಂದ ಅನುಮೋದನೆಯನ್ನು ಪಡೆದು, ಅದರನ್ವಯ ಸಿದ್ದಪಡಿಸಿದ ಅಂದಾಜುಪಟ್ಟಿಗಳಿಗೆ ಆಡಳಿತಾತ್ಮಕ ಮತ್ತು ತಾಂತ್ರಿಕ ಅನುಮೋದನೆಯನ್ನು ತಾಂತ್ರಿಕ ಸಲಹಾ ಸಮಿತಿಯಿಂದ ಹಾಗೂ ಪ್ರಧಾನ ವ್ಯವಸ್ಥಾಪಕರು, ಕೆ.ಯು.ಐ.ಡಿ.ಎಫ್.ಸಿ., ಬೆಂಗಳೂರು ಇವರಿಂದ ತಾಂತ್ರಿಕ ಮಂಜೂರಾತಿಯನ್ನು ಪಡೆದು ಇ-ಟೆಂಡರ್ ಮೂಲಕ ಸಂರಕ್ಷಣಾ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ.

## 2205-00-103-0-01-059 ಇತರೆ ಖರ್ಚುಗಳು

| ಕ್ರ.ಸಂ | ಕಾಮಗಾರಿಗಳ ವಿವರ | 2018-19ನೇ ಸಾಲಿನ ವೆಚ್ಚ ರೂ.ಗಳಲ್ಲಿ |
|---|---|---|
| **I** | **ಮುಂದುವರೆದ ಕಾಮಗಾರಿಗಳು** | |
| 1 | ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಬೆಳಗಲಿಯಲ್ಲಿರುವ ಶ್ರೀ ವೇಣುಗೋಪಾಲಸ್ವಾಮಿ ದೇವಾಲಯದ ಸಂರಕ್ಷಣಾ ಕೆಲಸ | **2647727** |
| 2 | ಮೈಸೂರು ಜಿಲ್ಲೆ ಕೆ.ಆರ್.ನಗರ ತಾಲ್ಲೂಕು ಚುಂಚನಕಟ್ಟೆ ಹೋಬಳಿ ಮಾಯಗೌಡನಹಳ್ಳಿ ಗ್ರಾಮದ ಶ್ರೀ ಬಸವೇಶ್ವರ ದೇವಾಲಯದ ಸಂರಕ್ಷಣಾ ಕಾಮಗಾರಿ. | **1631839** |
| 3 | ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕು ಗೊದ್ದನಪುರದಲ್ಲಿರುವ ಶ್ರೀ ಶಂಭುಲಿಂಗೇಶ್ವರ ದೇವಾಲಯದ ಸಂರಕ್ಷಣಾ ಕಾಮಗಾರಿ | **486792** |
| 4 | ಮೈಸೂರು ಜಿಲ್ಲೆ ಮೈಸೂರು ತಾಲೂಕು ಹದಿನಾರು ಗ್ರಾಮದಲ್ಲಿರುವ ಶ್ರೀ ಚನ್ನಿಗರಾಯಸ್ವಾಮಿ' ದೇವಾಲಯದ ಸಂರಕ್ಷಣಾ ಕಾಮಗಾರಿ | **2293000** |

| | | |
|---|---|---|
| 5 | ಮೈಸೂರು ಜಿಲ್ಲೆ ಮೈಸೂರು ತಾಲೂಕು ವರಕೋಡು ಗ್ರಾಮದಲ್ಲಿರುವ ಶ್ರೀ ವರದರಾಜಸ್ವಾಮಿ ದೇವಾಲಯದ ರಾಜಗೋಪುರ ಮತ್ತು ಗರಡುಗಂಭ ಸಂರಕ್ಷಣಾ ಕಾಮಗಾರಿ | **1215047** |
| 7 | ಮಂಡ್ಯ ಜಿಲ್ಲೆ ಕೆ.ಆರ್.ಪೇಟೆ ತಾಲ್ಲೂಕು ಕಿಕ್ಕೇರಿಯಲ್ಲಿರುವ ಶ್ರೀ ಬ್ರಹ್ಮೇಶ್ವರ ದೇವಾಲಯದ ಸಂರಕ್ಷಣಾ ಕಾಮಗಾರಿ. | **1276000** |
| 8 | ಮಂಡ್ಯ ಜಿಲ್ಲೆ ಪಾಂಡವಪುರ ತಾಲ್ಲೂಕು ಬೆಳ್ಳಲೆ ಗ್ರಾಮದಲ್ಲಿರುವ ಶ್ರೀ ಈಶ್ವರ ದೇವಾಲಯದ ಸಂರಕ್ಷಣಾ ಕಾಮಗಾರಿ. | **3026752** |
| 10 | ದಕ್ಷಿಣಕನ್ನಡ ಜಿಲ್ಲೆ ಸುಳ್ಯ ತಾಲ್ಲೂಕು ಬಳಪದಲ್ಲಿರುವ ಶ್ರೀ ತ್ರಿಶೂಲಿನಿ ದೇವಾಲಯದ ಸಂರಕ್ಷಣಾ ಕೆಲಸ | **4024831** |
| 11 | ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲ್ಲೂಕು ಬೆಳಗುಳಿ ಗ್ರಾಮದಲ್ಲಿರುವ ಶ್ರೀ ಜೋಡಿ ಅಂಜನೇಯಸ್ವಾಮಿ ದೇವಾಲಯದ ಸಂರಕ್ಷಣಾ ಕಾಮಗಾರಿ | **1544697** |
| 12 | ತುಮಕೂರು ಜಿಲ್ಲೆ ಮಧುಗಿರಿ ತಾಲ್ಲೂಕಿನ ಮಧುಗಿರಿಯಲ್ಲಿರುವ ಶ್ರೀ ವೆಂಕಟರಾಮಣ ದೇವಸ್ಥಾನದ ಸಂರಕ್ಷಣಾ ಕಾಮಗಾರಿ | **2438653** |
| 13 | ದಾವಣಗೆರೆ ಜಿಲ್ಲೆ ಚನ್ನಗಿರಿ ತಾಲ್ಲೂಕಿನ ಚನ್ನಗಿರಿಯಲ್ಲಿರುವ ಶ್ರೀ ಶಿವಲಿಂಗೇಶ್ವರ ದೇವಸ್ಥಾನದ ಸಂರಕ್ಷಣಾ ಕಾಮಗಾರಿ. | **3167143** |
| 14 | ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲೂಕು ಬಸಾಪುರದ ಶ್ರೀ ವೀರಭದ್ರೇಶ್ವರ ದೇವಸ್ಥಾನದ ಸಂರಕ್ಷಣಾ ಕಾಮಗಾರಿ. | **3385667** |
| 15 | ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕು ಹೂಲಿಯಲ್ಲಿರುವ ಶ್ರೀ ಅಗಸ್ತೇಶ್ವರ ದೇವಾಲಯದ ಸಂರಕ್ಷಣಾ ಕಾಮಗಾರಿ | **1592235** |
| 16 | ಹಾವೇರಿ ಜಿಲ್ಲೆ ಬ್ಯಾಡಗಿ ತಾಲ್ಲೂಕು ಹಿರೆಹಳ್ಳಿ ಗ್ರಾಮದಲ್ಲಿರುವ ಶ್ರೀ ಗಜೇಶ್ವರ ದೇವಾಲಯದ ಸಂರಕ್ಷಣಾ ಕಾಮಗಾರಿ. | **1766594** |
| 17 | ಉತ್ತರ ಕನ್ನಡ ಜಿಲ್ಲೆ ಶಿರಸಿ ತಾಲ್ಲೂಕು ಸೊಂದಾದಲ್ಲಿರುವ ಶ್ರೀ ಮಹಂತಿಮಠದ ಸಂರಕ್ಷಣಾ ಕಾಮಗಾರಿ | **797522** |
| 18 | ಹಾವೇರಿ ಜಿಲ್ಲೆ ಶಿಗ್ಗಾಂ ತಾಲ್ಲೂಕು ಹೀರೆಮಣಕಟ್ಟಿ ಗ್ರಾಮದಲ್ಲಿರುವ ಶ್ರೀ ಕಲ್ಮೇಶ್ವರ ದೇವಾಲಯದ ಸಂರಕ್ಷಣಾ ಕಾಮಗಾರಿ | **1415000** |
| 19 | ಹಾವೇರಿ ಜಿಲ್ಲೆ ಬ್ಯಾಡಗಿ ತಾಲ್ಲೂಕು ಶಿಡೇನೂರು ಗ್ರಾಮದಲ್ಲಿರುವ ಶ್ರೀ ವೀರಭದ್ರೇಶ್ವರ ಮತ್ತು ಕಲ್ಮೇಶ್ವರ ದೇವಾಲಯದ ಸಂರಕ್ಷಣಾ ಕಾಮಗಾರಿ | **2234424** |
| 20 | ಗದಗ ಜಿಲ್ಲೆ ಗದಗ ತಾಲೂಕು ನೀಲಗುಂದದಲ್ಲಿರುವ ಶ್ರೀ ನಾರಾಯಣ ದೇವಾಲಯದ ಸಂರಕ್ಷಣಾ ಕಾಮಗಾರಿ | **2019748** |
| 21 | ಕಲಬುರ್ಗಿ ಜಿಲ್ಲೆ ಕಲಬುರ್ಗಿ ನಗರದಲ್ಲಿರುವ ಹಜರತ್ ಸಿರಾಜುದ್ದೀನ ದರ್ಗಾದ(ಶೇಖ ರೋಜಾ) ಸಂರಕ್ಷಣಾ ಕಾಮಗಾರಿ. | **800000** |
| 22 | ಕಲಬುರ್ಗಿ ಜಿಲ್ಲೆ ಕಲಬುರ್ಗಿ ನಗರದಲ್ಲಿರುವ ಹಸನಗಂಗು ಬಹಮನೀ ಶಾ–1 ಟೂಂಬನ ಸಂರಕ್ಷಣಾ ಕಾಮಗಾರಿ. | **2000000** |
| 23 | ಯಾದಗಿರಿ ಜಿಲ್ಲೆ ಷಹಪುರ ತಾಲ್ಲೂಕು ಗೊಗಿಯಲ್ಲಿನ ಮಸೀದಿ ಹಾಗೂ ದರ್ಗಾದ ಸಂರಕ್ಷಣಾ ಕಾಮಗಾರಿ | **1000000** |
| | **200 ನಿರ್ವಹಣೆ : ಮುಂದುವರೆದ ಕಾಮಗಾರಿಗಳು** | |
| 24 | ಮೈಸೂರು ನಗರದಲ್ಲಿರುವ ಕೇಂದ್ರ ಕಛೇರಿಗೆ ಮೀಟಿಂಗ್ ಹಾಲ್‌ಗೆ ಅಕೋಸ್ಟಿಕ್ ಹಾಗೂ ಪಕ್ಕದಲ್ಲಿ ಏ.ಸಿ., ಕಿಟಿಕಿಗಳನ್ನು ಅಳವಡಿಸುವುದು ಮತ್ತು ಕಛೇರಿಯ ಒಳ ಮತ್ತು ಹೊರ ಭಾಗಕ್ಕೆ ಬಣ್ಣ ಲೇಪನ ಕಾಮಗಾರಿ. | **821550** |

| | | |
|---|---|---|
| 25 | ಗದಗ ಜಿಲ್ಲೆ ಶಿರಹಟ್ಟಿ ತಾಲ್ಲೂಕು ಲಕ್ಷ್ಮೇಶ್ವರದಲ್ಲಿರುವ ಶ್ರೀ ಸೋಮೇಶ್ವರ ದೇವಾಲಯದ ವಾರ್ಷಿಕ ನಿರ್ವಹಣೆ ಹಾಗೂ ಉದ್ಯಾನವನದ ನಿರ್ವಹಣೆ. | **326831** |
| 26 | ಗದಗ ಜಿಲ್ಲೆ ಗದಗ ತಾಲೂಕು ಮುಳಗುಂದದಲ್ಲಿರುವ ಸಿದ್ದೇಶ್ವರ ದೇವಸ್ಥಾನದ ಉದ್ಯಾನವನದ ನಿರ್ವಹಣೆ | **148000** |

**ಲೆಕ್ಕಶೀರ್ಷಿಕೆ: 2205-00-103-0-21 ಪರಂಪರೆ ಆಯುಕ್ತರು**

| ಕ್ರ.ಸಂ | ಕಾಮಗಾರಿಗಳ ವಿವರ | 2018-19ನೇ ಸಾಲಿನ ವೆಚ್ಚ ರೂ.ಗಳಲ್ಲಿ |
|---|---|---|
| | **2016-17ನೇ ಸಾಲಿನ ಕಾರ್ಯಕ್ರಮಗಳು – ಆಯವ್ಯಯ ಭಾಷಣದ ಕಂಡಿಕೆ ಸಂಖ್ಯೆ (241)** | |
| 1 | ಯಾದಗಿರಿ ಜಿಲ್ಲೆ, ಶಹಪುರ ತಾಲ್ಲೂಕು, ಶಿರವಾಳ ಸ್ಮಾರಕಗಳ ಸಮುಚ್ಚಯಗಳ ಸಂರಕ್ಷಣೆ | **6102000** |
| 2 | ಚಾಮರಾಜನಗರ ಜಿಲ್ಲೆ ಚಾಮರಾಜನಗರ ತಾಲ್ಲೂಕು ಚಾಮರಾಜನಗರದಲ್ಲಿರುವ ಶ್ರೀ ಚಾಮರಾಜೇಶ್ವರ ದೇವಾಲಯದ ಸಂರಕ್ಷಣೆ | **5420126** |
| | **ಆಯವ್ಯಯ ಭಾಷಣದ ಕಂಡಿಕೆ ಸಂಖ್ಯೆ (245)** | |
| 3 | ವಿಜಯಪುರ ಜಿಲ್ಲೆ ಸಿಂದಗಿ ತಾಲ್ಲೂಕಿನಲ್ಲಿರುವ ಮಡಿವಾಳ ಮಾಚಿ ದೇವರ ಜನ್ಮ ಸ್ಥಳವಾದ ದೇವರ ಹಿಪ್ಪರಗಿಯನ್ನು ಅಭಿವೃದ್ಧಿಪಡಿಸುವುದು. | **17119000** |
| | **ಆಯವ್ಯಯ ಭಾಷಣದ ಕಂಡಿಕೆ ಸಂಖ್ಯೆ (284)** | |
| 4 | ವಿಶ್ವ ಪರಂಪರೆ ತಾತ್ಕಾಲಿಕ ಪಟ್ಟಿಯಲ್ಲಿರುವ ರಾಜ್ಯದ ಮೂರು ಸ್ಮಾರಕ ಸಮೂಹ ತಾಣಗಳ ಡೋಸಿಯರ್ ಮತ್ತು ವರದಿ ತಯಾರಿಕೆಗೆ ರೂ.3.00 ಕೋಟಿಯ ಘೋಷಿತ ಅನುದಾನ. | **6365000** |
| | **ಆಯವ್ಯಯ ಭಾಷಣದ ಕಂಡಿಕೆ ಸಂಖ್ಯೆ (285)** | |
| 5 | ಯಾದಗಿರಿ ಜಿಲ್ಲೆ ಸುರಪುರ ತಾಲ್ಲೂಕು ಮುದನೂರು ಗ್ರಾಮದಲ್ಲಿರುವ ಶ್ರೀ ದೇವರದಾಸಿಮಯ್ಯ ದೇವಾಲಯದ ಸಂರಕ್ಷಣಾ ಕೆಲಸ. | **1222000** |
| 6 | ಕಲಬುರ್ಗಿ ಜಿಲ್ಲೆ ಚಿತ್ತಾಪುರ ತಾಲ್ಲೂಕು ಮಳಖೇಡ ಕೋಟೆಯ ಸಂರಕ್ಷಣೆ ಹಾಗೂ ಸಮಗ್ರ ಅಭಿವೃದ್ಧಿ. | **6068000** |
| 7 | ತುಮಕೂರು ಜಿಲ್ಲೆ ತಿಪಟೂರು ತಾಲ್ಲೂಕು ಅರಳುಗುಪ್ಪೆ ಗ್ರಾಮದ ಕಲ್ಲೇಶ್ವರ ದೇವಸ್ಥಾನದ ಸಂರಕ್ಷಣಾ ಕಾಮಗಾರಿ (2ನೇ ಹಂತ) | **1801850** |
| 8 | ಬೀದರ್ ಜಿಲ್ಲೆ ಬೀದರ್ ತಾಲೂಕಿನಲ್ಲಿರುವ ಫತೇಪೂರ್ ಗ್ರಾಮದ ಅಮೀರ್ ಫಕೀರ್ ಉಲ್ ಮುಲ್ಕ್ ಗಿಲಾನ್ಸ್ ಗುಂಬಜ್ ನ ಸಂರಕ್ಷಣಾ ಕಾಮಗಾರಿ | **1469000** |
| 9 | ಮಂಡ್ಯ ಜಿಲ್ಲೆ ಪಾಂಡವಪುರ ತಾಲ್ಲೂಕು ಮೇಲುಕೋಟೆ ಪಾರಂಪರಿಕ ಪ್ರದೇಶದಲ್ಲಿರುವ ಅಕ್ಕನ ಕೊಳದ ಪಕ್ಕದಲ್ಲಿರುವ ಮಂಟಪದ ಸಂರಕ್ಷಣಾ ಕಾಮಗಾರಿ ಹಾಗೂ ತಂಗಿಯ ಕೊಳದ ಹಾಳಾಗಿರುವ ಆವರಣದಲ್ಲಿನ ಗೋಡೆ ನಿರ್ಮಾಣ | **3639407** |
| 10 | ಮಂಡ್ಯ ಜಿಲ್ಲೆ ಪಾಂಡವಪುರ ತಾಲ್ಲೂಕು ಮೇಲುಕೋಟೆ ಪಾರಂಪರಿಕ ಪ್ರದೇಶದಲ್ಲಿರುವ ಲಿಂಗಯ್ಯನ ಕೊಳದ ಸುತ್ತಲು ಇರುವ ಆವರಣದಲ್ಲಿನ ಗೋಡೆಯನ್ನು ಎತ್ತರಿಸುವ ಕಾಮಗಾರಿ | **751186** |
| 11 | ಉಡುಪಿ ಜಿಲ್ಲೆ ಉಡುಪಿ ತಾಲ್ಲೂಕು ಸೂರಲಿನಲ್ಲಿರುವ ಸುರಾಲು ಮಣ್ಣಿನ ಅರಮನೆಯ ಸಂರಕ್ಷಣಾ ಕೆಲಸ. (ಜಿಲ್ಲಾಧಿಕಾರಿಗಳು, ಉಡುಪಿ ಜಿಲ್ಲೆ ಇವರಿಗೆ ಅನುದಾನ ಬಿಡುಗಡೆ ಮಾಡಬೇಕಾಗಿದೆ) | **1000000** |

| | | |
|---|---|---|
| 12 | ಪಾರಂಪರಿಕ ಕಟ್ಟಡಗಳ ತುರ್ತು ದುರಸ್ಥಿ ಪಡಿಸಲು. | **579168** |

## ಲೆಕ್ಕಶೀರ್ಷಿಕೆ: 2205-00-103-0-25 ಸಂಸ್ಕೃತಿ ಸಂಗ್ರಹಾಲಯ

| | | |
|---|---|---|
| 1 | ಧಾರವಾಡ ನಗರದಲ್ಲಿರುವ ಪಾರಂಪರಿಕ ಲಿಂಗಾಯಿತ ನಗರಭವನದ ಜೀರ್ಣೋದ್ದಾರ ಹಾಗೂ ನವೀಕರಿಸುವುದು. | **1250000** |

## ಲೆಕ್ಕಶೀರ್ಷಿಕೆ:2205-00-107-0-01 ಸರ್ಕಾರಿ ವಸ್ತು ಸಂಗ್ರಹಾಲಯಗಳು

| | | |
|---|---|---|
| 1 | ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣದಲ್ಲಿರುವ ಶ್ರೀ ಚಾಮರಾಜೇಂದ್ರ ಸರ್ಕಾರಿ ವಸ್ತು ಸಂಗ್ರಹಾಲಯಕ್ಕೆ ಶುದ್ಧ ಕುಡಿಯುವ ನೀರಿನ ಘಟಕ, ಅಗ್ನಿ ನಿರೋಧಕ, ಸಿಸಿ ಕ್ಯಾಮರಾ ಅಳವಡಿಸುವುದು, ನಾಮ ಫಲಕ ಮತ್ತು ಸೂಚನಾ ಫಲಕಗಳನ್ನು ಅಳವಡಿಸುವುದು. | **211466** |
| 2 | ಮಡಿಕೇರಿಯಲ್ಲಿರುವ ಸರ್ಕಾರಿ ವಸ್ತು ಸಂಗ್ರಹಾಲಯಕ್ಕೆ ಶುದ್ಧ ಕುಡಿಯುವ ನೀರಿನ ಘಟಕ, ಅಗ್ನಿ ನಿರೋಧಕ, ಸಿಸಿ ಕ್ಯಾಮರಾ ಅಳವಡಿಸುವುದು, ನಾಮ ಫಲಕ ಮತ್ತು ಸೂಚನಾ ಫಲಕಗಳನ್ನು ಅಳವಡಿಸುವುದು. | **25260** |
| 3 | ಬೀದರ್ ಜಿಲ್ಲೆ ಬಸವ ಕಲ್ಯಾಣದುಲ್ಲಿರುವ ಸರ್ಕಾರಿ ವಸ್ತು ಸಂಗ್ರಹಾಲಯಕ್ಕೆ ಶುದ್ಧ ಕುಡಿಯುವ ನೀರಿನ ಘಟಕ, ಅಗ್ನಿ ನಿರೋಧಕ, ಸಿಸಿ ಕ್ಯಾಮರಾ ಅಳವಡಿಸುವುದು, ನಾಮ ಫಲಕ ಮತ್ತು ಸೂಚನಾ ಫಲಕಗಳನ್ನು ಅಳವಡಿಸುವುದು. | **398106** |
| 4 | ಕಲ್ಬುರ್ಗಿಯಲ್ಲಿರುವ ಸರ್ಕಾರಿ ವಸ್ತು ಸಂಗ್ರಹಾಲಯಕ್ಕೆ ಶುದ್ಧ ಕುಡಿಯುವ ನೀರಿನ ಘಟಕ, ಅಗ್ನಿ ನಿರೋಧಕ, ಸಿಸಿ ಕ್ಯಾಮರಾ ಅಳವಡಿಸುವುದು, ನಾಮ ಫಲಕ ಮತ್ತು ಸೂಚನಾ ಫಲಕಗಳನ್ನು ಅಳವಡಿಸುವುದು. | **398106** |
| 5 | ಬೆಳಗಾವಿ ಜಿಲ್ಲೆ ಅಥಣಿಯಲ್ಲಿರುವ ಸರ್ಕಾರಿ ವಸ್ತು ಸಂಗ್ರಹಾಲಯಕ್ಕೆ ಶುದ್ಧ ಕುಡಿಯುವ ನೀರಿನ ಘಟಕ, ಅಗ್ನಿ ನಿರೋಧಕ, ಸಿಸಿ ಕ್ಯಾಮರಾ ಅಳವಡಿಸುವುದು, ನಾಮ ಫಲಕ ಮತ್ತು ಸೂಚನಾ ಫಲಕಗಳನ್ನು ಅಳವಡಿಸುವುದು. | **160812** |
| 6 | ರಾಯಚೂರ್ ಸರ್ಕಾರಿ ವಸ್ತು ಸಂಗ್ರಹಾಲಯದಲ್ಲಿರುವ ಸರ್ಕಾರಿ ವಸ್ತು ಸಂಗ್ರಹಾಲಯಕ್ಕೆ ಶುದ್ಧ ಕುಡಿಯುವ ನೀರಿನ ಘಟಕ, ಅಗ್ನಿ ನಿರೋಧಕ, ಸಿಸಿ ಕ್ಯಾಮರಾ ಅಳವಡಿಸುವುದು, ನಾಮ ಫಲಕ ಮತ್ತು ಸೂಚನಾ ಫಲಕಗಳನ್ನು ಅಳವಡಿಸುವುದು. | **350300** |
| 7 | ಗದಗ ಜಿಲ್ಲೆ, ಗದಗ ಸರ್ಕಾರಿ ವಸ್ತು ಸಂಗ್ರಹಾಲಯಕ್ಕೆ ಶುದ್ಧ ಕುಡಿಯುವ ನೀರಿನ ಘಟಕ, ಅಗ್ನಿ ನಿರೋಧಕ, ಸಿಸಿ ಕ್ಯಾಮರಾ ಅಳವಡಿಸುವುದು, ನಾಮ ಫಲಕ ಮತ್ತು ಸೂಚನಾ ಫಲಕಗಳನ್ನು ಅಳವಡಿಸುವುದು. | **263989** |
| | **200-ನಿರ್ವಹಣೆ** | |
| 8 | ಮೈಸೂರುನಗರದಲ್ಲಿನ ವೆಲ್ಲಿಂಗ್‌ಟನ್ ವಸ್ತು ಸ9ಂಗ್ರಹಾಲಯದ ಉದ್ಯಾನವನ ನಿರ್ವಹಣೆ | **194640** |
| 9 | ಶಿವಮೊಗ್ಗ ಜಿಲ್ಲೆಯಲ್ಲಿರುವ ಶಿವಪ್ಪನಾಯಕ ಅರಮನೆಯ ಉದ್ಯಾನವನ ನಿರ್ಮಾಣ ಮತ್ತು ಅಭಿವೃದ್ದ ಕಾಮಗಾರಿ | **717063** |
| 10 | ಕಲ್ಬುರ್ಗಿ ಜಿಲ್ಲೆಯಲ್ಲರಿವ ಸರ್ಕಾರಿ ವಸ್ತು ಸಂಗ್ರಹಾಲಯದ ಉದ್ಯಾನವನ ನಿರ್ವಹಣೆ ಅಬಿವೃದ್ಧಿ ಕಾಮಗಾರಿ | **301477** |
| 11 | ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕು ಕಿತ್ತೂರಿನಲ್ಲಿರುವ ಸರ್ಕಾರಿ ವಸ್ತು ಸಂಗ್ರಹಾಲಯಕ್ಕೆ ಉದ್ಯಾನವನ ನಿರ್ವಹಣೆ ಮತ್ತು ಅಭಿವೃದ್ಧಿ ಕಾಮಗಾರಿ | **174859** |
| 12 | ಗದಗ ಜಿಲ್ಲೆ ಗದಗ ನಗರದಲ್ಲಿರುವ ಸರ್ಕಾರಿ ವಸ್ತು ಸಂಗ್ರಹಾಲಯಕ್ಕೆ ಉದ್ಯಾನವನ ನಿರ್ವಹಣೆ ಮತ್ತು ಅಭಿವೃದ್ಧಿ ಕಾಮಗಾರಿ | **176056** |
| 13 | ನಿರ್ದೇಶಕರು, ಸಹಾಯಕ ನಿರ್ದೇಶಕರು, ಕ್ಯೂರೇಟರ್ ಮತ್ತು ಸಹಾಯಕ ಕ್ಯೂರೇಟರ್‌ರವರ ಮೇಲ್ವಿಚಾರಣೆಯಲ್ಲಿ ಇಲಾಖೆಯ ಅಧೀನದಲ್ಲಿ ಬರುವ ಸರ್ಕಾರಿ ವಸ್ತು ಸಂಗ್ರಹಾಲಯಗಳಲ್ಲಿ ಕಲಾಕೃತಿಗಳನ್ನು ಪ್ರದರ್ಶಿಸಲು ವುಡನ್ ಫೆಡಸ್ಟಲ್(ಷೋಕೇಸ್) ಗಳನ್ನು ಅಳವಡಿಸುವುದು | **1390688** |

| | | |
|---|---|---|
| | ಹಾಗೂ ವಸ್ತು ಸಂಗ್ರಹಾಲಯಗಳ ಮೂಲಭೂತ ಸೌಕರ್ಯಗಳ ನಿರ್ವಹಣೆಗೆ. | |

**ಲೆಕ್ಕಶೀರ್ಷಿಕೆ: 4202–04–101–0–02 139 ಪ್ರಧಾನ ಕಾಮಗಾರಿಗಳು**

| | | |
|---|---|---|
| 1 | ಹಾವೇರಿ ಜಿಲ್ಲೆ ಸವಣೂರು ತಾಲ್ಲೂಕಿನ ಸವಣೂರಿನಲ್ಲಿ ನವಾಬರ ಕಾಲದ ಪಾರಂಪರಿಕ ಕಟ್ಟಡಗಳ ಆಧುನೀಕರಣವನ್ನು ವಸ್ತು ಸಂಗ್ರಹಾಲಯವನ್ನಾಗಿ ಪರಿವರ್ತಿಸುವುದು. (ರೂ.2.00ಕೋಟಿಗಳ ಪ್ರಸ್ತಾವನೆ) | **7115005** |
| 2 | ಮೈಸೂರು ಕೇಂದ್ರ ಕಛೇರಿಯ ಆವರಣದಲ್ಲಿ ಮಿಟಿಂಗ್ ಹಾಲ್ ನಿರ್ಮಾಣ. | **193352** |
| 3 | ಹಾಸನ ವಸ್ತುಸಂಗ್ರಹಾಲಯದ 2ನೇ ಅಂತಸ್ತಿನ ಕಟ್ಟಡ ನಿರ್ಮಾಣ. | **2690166** |
| 4 | ಗದಗ ಜಿಲ್ಲೆ ಗದಗ ಸರ್ಕಾರಿ ವಸ್ತು ಸಂಗ್ರಹಾಲಯದ ಒಂದನೇ ಮಹಡಿ ಕಟ್ಟಡದ ಕಾಮಗಾರಿ | **49702** |
| 6 | ಗದಗ ಜಿಲ್ಲೆ ಗದಗ ನಗರದ ಸರ್ಕಾರಿ ವಸ್ತು ಸಂಗ್ರಹಾಲಯವನ್ನು ನವೀಕರಿಸಿದ ಮುಖ್ಯದ್ವಾರಕ್ಕೆ ಹೊಂದಿಕೊಂಡಂತೆ ಕಾಂಪೌಂಡ್ ನಿರ್ಮಾಣ ಕಾಮಗಾರಿ. | **402076** |
| | **ಹೊಸ ಕಾಮಗಾರಿಗಳು** | |
| 7 | ಮಡಿಕೇರಿ ವಸ್ತು ಸಂಗ್ರಹಾಲಯ ಕಟ್ಟಡ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿಗಾಗಿ. | **194163** |
| 8 | ಮೈಸೂರುನಗರದಲ್ಲಿನ ವೆಲ್ಲಿಂಗ್‌ಟನ್ ವಸ್ತು ಸಂಗ್ರಹಾಲಯದ ಕಟ್ಟಡ ನಿರ್ವಹಣೆ. | **275321** |
| 9 | ಚಾಮರಾಜನಗರ ಜಿಲ್ಲೆ ಯಳಂದೂರಿನಲ್ಲಿರುವ ದಿವಾನ್ ಪೂರ್ಣಯ್ಯ ಸರ್ಕಾರಿ ವಸ್ತು ವಸ್ತುಸಂಗ್ರಹಾಲಯ ಅಭಿವೃದ್ಧಿಗಾಗಿ. | **197649** |
| 10 | ಬೆಂಗಳೂರಿನ ವೆಂಕಟಪ್ಪ ಚಿತ್ರಶಾಲೆಯ ದುರಸ್ಥಿ ಕಾಮಗಾರಿ. | **277977** |
| 11 | ಇಲಾಖೆಯ ವ್ಯಾಪ್ತಿಯಲ್ಲಿರುವ ವಸ್ತು ಸಂಗ್ರಹಾಲಯಗಳಲ್ಲಿ ಫೆಡಸ್ಟಲ್‌ಗಳ ನಿರ್ಮಾಣ ಕಾಮಗಾರಿ. | **69000** |
| 12 | ಯಾದಗಿರಿ ಜಿಲ್ಲೆ ಯಾದಗಿರಿ ಕೋಟೆಯಲ್ಲಿನ ತೆರೆದ ದ್ವಾರಗಳಿಗೆ ಆರ್ಚ್ ಗ್ರಿಲ್‌ಗಳನ್ನು ಅಳವಡಿಸುವ ಸಂರಕ್ಷಣಾ ಕಾಮಗಾರಿ. | **194296** |
| **III** | **ಇತರೆ ಕಾರ್ಯಕ್ರಮಗಳು:** | |
| 13 | ಮೈಸೂರು ಜಿಲ್ಲೆ ಆಯುಕ್ತರ ಕಛೇರಿಗೆ ಸಿಸಿ ಕ್ಯಾಮರಾಗಳನ್ನು ಅಳವಡಿಸುವ ಕೆಲಸ | **370259** |
| 14 | ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಕೊಡಗು ಜಿಲ್ಲೆ, ಮಡಿಕೇರಿಯಲ್ಲಿರುವ ರಾಜರ ಗದ್ದುಗೆ, ವಸ್ತು ಸಂಗ್ರಹಾಲಯ ಮತ್ತು ನಾಲ್ಕನಾಡು ಅರಮನೆಗೆ ಮಾಹಿತಿ ಹಾಗೂ ಮಾರ್ಗ ಫಲಕಗಳನ್ನು ಅಳವಡಿಸುವ ಕೆಲಸ | **98800** |
| 15 | ಬೆಂಗಳೂರಿನ ಕಸ್ತೂರಿಬಾ ರಸ್ತೆಯಲ್ಲಿರುವ ಸರ್ಕಾರಿ ವಸ್ತು ಸಂಗ್ರಹಾಲಯ ಮತ್ತು ವೆಂಕಟಪ್ಪ ಚಿತ್ರಶಾಲೆಯ ಆವರಣದಲ್ಲಿ 250ಎಲ್‌ಪಿಹೆಚ್ ಶುದ್ಧ ಕುಡಿಯುವ ನೀರಿನ ಘಟಕ (ಆರ್.ಓ.ಫ್ಲಾಂಟ್) ಸರಬರಾಜು ಮಾಡಲು | **99899** |
| 16 | ಬೆಂಗಳೂರಿನ ಕಸ್ತೂರಿಬಾ ರಸ್ತೆಯಲ್ಲಿರುವ ಸರ್ಕಾರಿ ವಸ್ತು ಸಂಗ್ರಹಾಲಯ ಮತ್ತು ವೆಂಕಟಪ್ಪ ಚಿತ್ರಶಾಲೆಯ ಆವರಣದಲ್ಲಿ 250ಎಲ್‌ಪಿಹೆಚ್ ಶುದ್ಧ ಕುಡಿಯುವ ನೀರಿನ ಘಟಕಕ್ಕೆ ಫೈಬರ್ ಷೆಡ್‌ನ್ನು ಮಾಡುವ ಕೆಲಸ. | **97999** |
| 17 | ಮಡಿಕೇರಿ ಸರ್ಕಾರಿ ವಸ್ತು ಸಂಗ್ರಹಾಲಯಕ್ಕೆ ಕುಡಿಯುವ ನೀರಿನ ಶುದ್ಧೀಕರಣ ಯಂತ್ರವನ್ನು ಅಳವಡಿಸುವ ಕೆಲಸ ಹಾಗೂ ಹೊಸದಾಗಿ ಯು.ಪಿ.ಎಸ್ ಹಾಗೂ ಎಕ್ಸ್ಟೆಂನ್ಷನ್ ಬಾಕ್ಸ್ ಅಳವಡಿಸುವ ಕೆಲಸ | **51000** |

## 26 ಪ್ರವಾಸೋದ್ಯಮ ಇಲಾಖೆ :

ಪ್ರವಾಸೋದ್ಯಮ ಇಲಾಖೆಯಿಂದ ಲೆಕ್ಕಶೀರ್ಷಿಕೆ:5452–01–800–0–14 132 ಬಂಡವಾಳ ವೆಚ್ಚಗಳ ಯೋಜನೆ ಅಡಿಯಲ್ಲಿ ರೂ.2,33,95,655/–ಗಳ ಅನುದಾನ ಬಿಡುಗಡೆಯಾಗಿದ್ದು, ಅದರಲ್ಲಿ ರೂ.2,33,95,655/–ಗಳ ಅನುದಾನವನ್ನು ಈ ಕೆಳಕಂಡ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ವೆಚ್ಚ ಮಾಡಲಾಗಿದೆ.

| ಕ್ರ ಸಂ | ಕಾಮಗಾರಿ ಹೆಸರು | 2018–19ನೇ ಸಾಲಿನಲ್ಲಿ ಮಾಡಲಾಗಿರುವ ವೆಚ್ಚ |
|---|---|---|
| | **ಬೆಂಗಳೂರು ವಿಭಾಗ** | |
| 1 | ಬೆಂಗಳೂರು ನಗರದ ಕಬ್ಬನ್ ಪಾರ್ಕ್‌ನಲ್ಲಿರುವ ಕಿಂಗ್ ಎಡ್ವರ್ಡ್ ಪ್ರತಿಮೆಯ ಸುತ್ತ ಇರುವ ಕಾಂಪೌಂಡ್ ವಾಲ್ ನವೀಕರಣ ಕಾಮಗಾರಿ. | 1484182 |
| | **ತುಮಕೂರು ಜಿಲ್ಲೆ** | |
| 2 | ತುಮಕೂರು ಜಿಲ್ಲೆ, ಶಿರಾ ತಾಲ್ಲೂಕು ಶಿರಾ ಪಟ್ಟಣದಲ್ಲಿರುವ ಶ್ರೀ ಕಸ್ತೂರಿ ರಂಗಪ್ಪನಾಯಕನ ಕೋಟೆಯ ಸಂರಕ್ಷಣಾ ಕಾಮಗಾರಿ (ಪಿಡಿ ಖಾತೆ) | 6954155 |
| | **ಮಂಡ್ಯ ಜಿಲ್ಲೆ** | |
| 3 | ಮಂಡ್ಯ ಜಿಲ್ಲೆ, ಪಾಂಡವಪುರ ತಾಲ್ಲೂಕು, ಮೇಲುಕೋಟೆಯ ಶ್ರೀ ಚೆಲುವ ನಾರಾಯಣಸ್ವಾಮಿ ದೇವಾಲಯದ ಎದುರುಗಡೆ ಇರುವ ವಾಹನದ ಮಂಟಪದ ಸಂರಕ್ಷಣಾ ಕಾಮಗಾರಿ. | 1000000 |
| 4 | ಮಂಡ್ಯ ಜಿಲ್ಲೆ, ಪಾಂಡವಪುರ ತಾಲ್ಲೂಕು, ಮೇಲುಕೋಟೆಯ ಶ್ರೀ ಪೇಟೆ ಆಂಜನೇಯ ಸ್ವಾಮಿ ದೇವಾಲಯದ ಹತ್ತಿರವಿರುವ ಹೆಬ್ಬಾಗಿಲಿನ ಸಂರಕ್ಷಣಾ ಕಾಮಗಾರಿ | 343346 |
| 5 | ಮಂಡ್ಯ ಜಿಲ್ಲೆ, ಪಾಂಡವಪುರ ತಾಲ್ಲೂಕು, ಮೇಲುಕೋಟೆಯ ಪಾಲಿಕೆಟ್ನಿಕ್ ಮುಂಭಾಗದಲ್ಲಿರುವ ಮಂಟಪದ ಸಂರಕ್ಷಣಾ ಕಾಮಗಾರಿ | 260923 |
| | **ಹಾಸನ ಜಿಲ್ಲೆ** | |
| 6 | ಹಾಸನ ಜಿಲ್ಲೆ, ಚನ್ನರಾಯಪಟ್ಟಣ ತಾಲ್ಲೂಕು, ಹಳೇಬೆಳಗೊಳ ಗ್ರಾಮದಲ್ಲಿರುವ ಶ್ರೀ ಪಾರ್ಶ್ವನಾಥ ದೇವಾಲಯದ ಸಂರಕ್ಷಣಾ ಕಾಮಗಾರಿ. | 647072 |
| 7 | ಹಾಸನ ಜಿಲ್ಲೆ, ಬೇಲೂರು ತಾಲ್ಲೂಕು, ಹಳೇಬೀಡಿನಲ್ಲಿರುವ ಶ್ರೀ ಮುತ್ತಿನವೀರಭದ್ರ ದೇವಾಲಯದ ಸಂರಕ್ಷಣಾ ಕಾಮಗಾರಿ. | 2795859 |

| ಕ್ರ ಸಂ | ಕಾಮಗಾರಿ ಹೆಸರು | 2018–19ನೇ ಸಾಲಿನಲ್ಲಿ ಮಾಡಲಾಗಿರುವ ವೆಚ್ಚ |
|---|---|---|
| 8 | ಹಾಸನ ಜಿಲ್ಲೆ, ಚನ್ನರಾಯಪಟ್ಟಣ ತಾಲ್ಲೂಕು, ಜಿನನಾಥಪುರದಲ್ಲಿರುವ ಶಾಂತಿನಾಥ ದೇವಾಲಯದ ಸಂರಕ್ಷಣಾ ಕಾಮಗಾರಿ. | 772049 |
| 9 | ಹಾಸನ ಜಿಲ್ಲೆ, ಚನ್ನರಾಯಪಟ್ಟಣ ತಾಲ್ಲೂಕು, ಹಳೇಬೆಳಗೊಳದಲ್ಲಿರುವ ಪುಷ್ಕರಣಿಯ ಸಂರಕ್ಷಣಾ ಕಾಮಗಾರಿ. | 592908 |
| | **ಮೈಸೂರು ಜಿಲ್ಲೆ** | |
| 10 | ಮೈಸೂರು ಜಿಲ್ಲೆ, ಹುಣಸೂರು ತಾಲ್ಲೂಕು, ತರೀಕಲ್ಲು ಗ್ರಾಮದಲ್ಲಿರುವ ಶ್ರೀ ಕಾಶಿಲಿಂಗೇಶ್ವರ ದೇವಾಲಯದ ಸಂರಕ್ಷಣಾ ಕಾಮಗಾರಿ. | 1554803 |
| 11 | ಮೈಸೂರು ಜಿಲ್ಲೆ, ಮೈಸೂರು ನಗರದ ಅರಮನೆ ಆವರಣದಲ್ಲಿರುವ ಶ್ರೀ ಲಕ್ಷ್ಮಿರಮಣ ದೇವಾಲಯದ ಸಂರಕ್ಷಣಾ ಕಾಮಗಾರಿ | 183840 |
| 12 | ಮೈಸೂರು ಜಿಲ್ಲೆ, ಮೈಸೂರು ನಗರದ ಅರಮನೆ ಆವರಣದಲ್ಲಿರುವ ಶ್ರೀ ಪ್ರಸನ್ನಕೃಷ್ಣ ದೇವಾಲಯದ ಸಂರಕ್ಷಣಾ ಕಾಮಗಾರಿ | 2894533 |
| 13 | ಮೈಸೂರು ಜಿಲ್ಲೆ, ಮೈಸೂರು ನಗರದ ಅರಮನೆ ಆವರಣದಲ್ಲಿರುವ ಶ್ರೀ ತ್ರಿನೇಶ್ವರ ದೇವಾಲಯದ ಸಂರಕ್ಷಣಾ ಕಾಮಗಾರಿ | 1265985 |
| 14 | ಮೈಸೂರು ಜಿಲ್ಲೆ, ಟಿ.ನರಸೀಪುರದಲ್ಲಿರುವ ಶ್ರೀ ಅಗಸ್ತ್ಯೇಶ್ವರ ದೇವಾಲಯದ ಸಂರಕ್ಷಣಾ ಕಾಮಗಾರಿ | 2500000 |
| 15 | Departmental work estimates technical scrutiny charges | 146000 |
| | **Grand Total** | 23395655 |

**27. ಇಲಾಖೆಯ ಪಿ.ಡಿ.ಖಾತೆ :.**

ಆಯುಕ್ತರು, ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು ಇವರ ವೈಯಕ್ತಿಕ ಠೇವಣಿ ಖಾತೆಯ ಸಂಖ್ಯೆ:06000001ನ್ನು ಸರ್ಕಾರಿ ಆದೇಶದ ಸಂಖ್ಯೆ:ಆಇ 53 ಟಿ.ಎ.ಆರ್ 2017 ಬೆಂಗಳೂರು, ದಿನಾಂಕ:06.09.2017ರ ಆದೇಶದಂತೆ ಪಿ.ಡಿ ಖಾತೆ ಹೊಂದಿದ್ದು, ಈ ಪಿಡಿ ಖಾತೆಯ ಲೆಕ್ಕಶೀರ್ಷಿಕೆ:8443–00–106–3–18ರಲ್ಲಿ 2018–19ನೇ ಸಾಲಿನ ಪ್ರಾರಂಭಿಕ ಠೇವಣಿಯಾಗಿ ರೂ.13,29,49,168/– (ಹದಿಮೂರು ಕೋಟಿ ಇಪ್ಪತ್ತೊಂಭತ್ತು ಲಕ್ಷದ ನಲವತ್ತೊಂಬತ್ತು ಸಾವಿರದ ಒಂದುನೂರ ಅರವತ್ತೆಂಟು ಮಾತ್ರ) ಗಳಿರುತ್ತದೆ. ಈ ಪಿಡಿ ಖಾತೆಯು ದಿನಾಂಕ:31.03.2019ರವರೆಗೆ ಮುಂದುವರೆಸಲಾಗಿದೆ.

ಇದರನ್ವಯ 2018–19ನೇ ಸಾಲಿನಲ್ಲಿ ಈ ಕೆಳಕಂಡ 15 ಸಂರಕ್ಷಣಾ ಕಾಮಗಾರಿಗಳನ್ನು ಅನುಷ್ಠಾನಗೊಳಿಸಿ ಒಟ್ಟಾರೆ ರೂ.**58809256/–**ಗಳ ಅನುದಾನವನ್ನು ವೆಚ್ಚ ಮಾಡಲಾಗಿದೆ. ವಿವರ ಇಂತಿದೆ.

| ಕ್ರ ಸಂ | ಕಾಮಗಾರಿಯ ಹೆಸರು | 2018–19ನೇ ಸಾಲಿನ ಒಟ್ಟಾರೆ ವೆಚ್ಚ ರೂ. |
|---|---|---|
| 1 | ರೋರಿಕ್ ಮತ್ತು ದೇವಿಕಾರಾಣಿ ರೋರಿಕ್ ಎಸ್ಟೇಟ್ ಮಂಡಳಿ ಅಭಿವೃದ್ಧಿ ಕಾರ್ಯಗಳಿಗಾಗಿ | 8413554.00 |
| 2 | ಲಾಲ್‌ಬಾಗ್ ಸಸ್ಯತೋಟದಲ್ಲಿರುವ ಡಾ// ಎಂ.ಹೆಚ್,ಮರಿಗೌಡ ಗ್ರಂಥಾಲಯ ಕಟ್ಟಡ ನವೀಕರಣ ಕಾಮಗಾರಿ | 627372.00 |
| 3 | ತುಮಕೂರು ಜಿಲ್ಲೆ, ಮಧುಗಿರಿ ಪಟ್ಟಣದಲ್ಲಿರುವ ಶ್ರೀ ಮಲ್ಲೇಶ್ವರ ದೇವಾಲಯದ ಪ್ರವೇಶ ದ್ವಾರದ ಬಲಭಾಗದಲ್ಲಿ ಬಿದ್ದುಹೋದ ಪ್ರಾಕಾರ ಮಂಟಪದ ಸಂರಕ್ಷಣಾ ಕೆಲಸ | 710293.00 |
| 4 | ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನ ಆನೆಗುಂದಿ ಗ್ರಾಮದ ನದಿ ದಂಡೆಯಲ್ಲಿರುವ ಸ್ನಾನಘಟ್ಟದ ಸಂರಕ್ಷಣಾ ಕಾಮಗಾರಿ | 20465000.00 |
| 5 | ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನ ಆನೆಗುಂದಿ ಗ್ರಾಮದ ಕೋಟೆಯಲ್ಲಿನ ಆನೆ ಮತ್ತು ಕುದುರೆ ಲಾಯದ ಸಂರಕ್ಷಣಾ ಕಾಮಗಾರಿ | 14835000.00 |
| 6 | ಚಾಮುಂಡಿ ಬೆಟ್ಟದ, ಶ್ರೀ ಚಾಮುಂಡೇಶ್ವರಿ ದೇವಾಲಯದ ಸಮೂಹ ದೇವಾಲಯವಾದ ಮೈಸೂರು ನಗರದ ರಾಮಾನುಜ ರಸ್ತೆಯಲ್ಲಿರುವ ಶ್ರೀ ಕಾಮಕಾಮೇಶ್ವರ ದೇವಾಲಯದ ಸಂರಕ್ಷಣೆ ಹಾಗೂ ಜೀರ್ಣೋದ್ಧಾರ ಕಾಮಗಾರಿ. | 231586.00 |
| 7 | ಚಾಮುಂಡಿ ಬೆಟ್ಟದ, ಶ್ರೀ ಚಾಮುಂಡೇಶ್ವರಿ ದೇವಾಲಯದ ಸಮೂಹ ದೇವಾಲಯವಾದ ಮೈಸೂರು ನಗರದ ಅರಮನೆ ಆವರಣದಲ್ಲಿರುವ ಶ್ರೀ ಖಿಲ್ಲೆವೆಂಕಟರಮಣ ಸ್ವಾಮಿ ದೇವಾಲಯದ ಸಂರಕ್ಷಣೆ ಹಾಗೂ ಜೀರ್ಣೋದ್ಧಾರ ಕಾಮಗಾರಿ. | 867289.00 |
| 8 | ಚಾಮುಂಡಿ ಬೆಟ್ಟದ, ಶ್ರೀ ಚಾಮುಂಡೇಶ್ವರಿ ದೇವಾಲಯದ ಸಮೂಹ ದೇವಾಲಯವಾದ ಮೈಸೂರು ನಗರದ ಅರಮನೆ ಆವರಣದಲ್ಲಿರುವ ಶ್ರೀ ಪಾಂಡುರಂಗ ದೇವಾಲಯದ ಸಂರಕ್ಷಣೆ ಹಾಗೂ ಜೀರ್ಣೋದ್ಧಾರ ಕಾಮಗಾರಿ. | 667849.00 |
| 9 | ಚಾಮುಂಡಿ ಬೆಟ್ಟದ, ಶ್ರೀ ಚಾಮುಂಡೇಶ್ವರಿ ದೇವಾಲಯದ ಸಮೂಹ ದೇವಾಲಯವಾದ ಮೈಸೂರು ನಗರದ ಅರಮನೆ ಆವರಣದಲ್ಲಿರುವ ಶ್ರೀ ಕೋಟೆ ಮಾರಮ್ಮ ದೇವಾಲಯದ ಸಂರಕ್ಷಣಾ ಕೆಲಸ. | 1717912.00 |
| 10 | ಚಾಮುಂಡಿ ಬೆಟ್ಟದ, ಶ್ರೀ ಚಾಮುಂಡೇಶ್ವರಿ ದೇವಾಲಯದ ಸಮೂಹ ದೇವಾಲಯವಾದ ಮೈಸೂರು ನಗರದ ಅರಮನೆ ಆವರಣದಲ್ಲಿರುವ ಶ್ರೀ ಗಾಯಿತ್ರಿ ದೇವಾಲಯದ ಸಂರಕ್ಷಣೆ ಹಾಗೂ ಜೀರ್ಣೋದ್ಧಾರ ಕಾಮಗಾರಿ. | 99878.00 |
| 11 | ಚಾಮುಂಡಿ ಬೆಟ್ಟದ, ಶ್ರೀ ಚಾಮುಂಡೇಶ್ವರಿ ದೇವಾಲಯಕ್ಕೆ ಸೇರಿದ ಚಾಮುಂಡಿ ಬೆಟ್ಟದ ನಂದಿ ವಿಗ್ರಹದ ಆವರಣ ಸಂರಕ್ಷಣೆ ಹಾಗೂ ಜೀರ್ಣೋದ್ಧಾರ ಕಾಮಗಾರಿ. | 186887.00 |

| | | |
|---|---|---|
| 12 | ಚಾಮುಂಡಿ ಬೆಟ್ಟದ, ಶ್ರೀ ಚಾಮುಂಡೇಶ್ವರಿ ದೇವಾಲಯದ ಸಮೂಹ ದೇವಾಲಯವಾದ ಮೈಸೂರು ನಗರದ ಅರಮನೆ ಆವರಣದಲ್ಲಿರುವ ಶ್ರೀ ಲಕ್ಷ್ಮೀರಮಣ ಸ್ವಾಮಿ ದೇವಾಲಯದ ರಾಜಗೋಪುರ ಮತ್ತು ಸುತ್ತಲಿನ ಪ್ರಭಾವಳಿಯ ಸಂರಕ್ಷಣೆ ಹಾಗೂ ಜೀರ್ಣೋದ್ಧಾರ ಕಾಮಗಾರಿ. | 675030.00 |
| 13 | ಹುಣಸೂರು ತಾಲ್ಲೂಕಿನ ಧರ್ಮಾಪುರ ಗ್ರಾಮದಲ್ಲಿನ 15ನೇ ಶತಮಾನದ ಶ್ರೀ ಚನ್ನಕೇಶವ ಸ್ವಾಮಿ ದೇವಸ್ಥಾನದ ಜೀರ್ಣೋದ್ಧಾರ ಮತ್ತು ಮೂಲಭೂತ ಸೌಕರ್ಯ ಕಲ್ಪಿಸುವ ಕಾಮಗಾರಿ | 2244232.00 |
| 14 | ಬಳ್ಳಾರಿ ಜಿಲ್ಲೆ ಹೊಸಪೇಟೆ ತಾಲ್ಲೂಕು ಹಂಪಿಯಲ್ಲಿರುವ ಬಜಾರ್‌ನಿಂದ ಕೋದಂಡರಾಮ ದೇವಾಲಯದವರೆಗೆ ಪಾರಂಪರಿಕ ಕಾಲುದಾರಿ ನಿರ್ಮಾಣ ಹಾಗೂ ಸಂರಕ್ಷಣಾ ಕಾಮಗಾರಿ. | 5421503.00 |
| 15 | ಚಾಮುಂಡಿ ಬೆಟ್ಟದ, ಚಾಮುಂಡೇಶ್ವರಿ ದೇವಾಲಯದ ಉತ್ತರ ಭಾಗದಲ್ಲಿರುವ ಕಛೇರಿ ಹಾಗೂ ಟಿಕೇಟ್ ಕೌಂಟರ್ ಮೇಲ್ಚಾವಣೆಯನ್ನು ಸಂಪೂರ್ಣವಾಗಿ ದುರಸ್ಥಿಪಡಿಸುವ ಕಾಮಗಾರಿ. | 1215726.00 |
| 16 | ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ಬೆಂಗಳೂರು ಇವರಿಂದ ಸಂಥ ಫಿಲೋಮಿನಾ ಚರ್ಚ್ ದುರಸ್ಥಿ ಬಾಬ್ತು. | 430145.00 |
| | **ಒಟ್ಟು ಮೊತ್ತ** | **58809256.00** |

**28. ಖಾಸಗೀ ಸಹಭಾಗಿತ್ವದ ಯೋಜನೆ:**

ಅ) ಸರ್ಕಾರದ ಆದೇಶ ಸಂಖ್ಯೆ:ಪ್ರಇ/40/ಕೆಎಂಯು/2019, ದಿನಾಂಕ:01.02.2019ರನ್ವಯ ಶ್ರೀ ಧರ್ಮಸ್ಥಳದ ಧರ್ಮೋತ್ಥಾನ ಟ್ರಸ್ಟ್ ಇವರ ಸಹಯೋಗದೊಂದಿಗೆ ಸ್ಮಾರಕಗಳ ಸಂರಕ್ಷಣೆ ಮತ್ತು ಅಭಿವೃದ್ಧಿಗಾಗಿ 2018-19ನೇ ಸಾಲಿನ 14ನೇ ಹಂತದ ಕ್ರಿಯಾಯೋಜನೆಯ ಒಟ್ಟು 16 ಸ್ಮಾರಕಗಳ ಸಂರಕ್ಷಣೆಗಾಗಿ ಅಂತಿಮ ಕಂತಿನ ಅನುದಾನ ರೂ.50.00ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

ಆ) ಮಂಡ್ಯ ಜಿಲ್ಲೆ, ಪಾಂಡವಪುರ ತಾಲ್ಲೂಕು, ಮೇಲುಕೋಟೆಯಲ್ಲಿರುವ ಶ್ರೀ ಯೋಗಾನರಸಿಂಹ ಸ್ವಾಮಿ ದೇವಾಲಯದ ರಾಜಗೋಪುರದ ಸಂರಕ್ಷಣೆಯನ್ನು ಅನಿವಾಸಿ ಭಾರತೀಯರಾದ ಶ್ರೀ ರವೀಂದ್ರ ಇವರು ರೂ. 150.00 ಲಕ್ಷಗಳ ಸ್ವಂತ ವೆಚ್ಚದಲ್ಲಿ ಇಲಾಖೆಯ ಪುರಾತತ್ವ ಸಂರಕ್ಷಣಾ ಇಂಜಿನಿಯರ್, ದಕ್ಷಿಣ ವಲಯ ಮತ್ತು ತಾಂತ್ರಿಕ ಸಲಹಾ ಸಮಿತಿ ಮಾರ್ಗದರ್ಶನದಲ್ಲಿ ಇಲಾಖೆಯ ಸಂರಕ್ಷಣಾ ಕಾಮಗಾರಿಯನ್ನು ನಿರ್ವಹಿಸಿ ಅನುಭವವಿರುವ ಗುತ್ತಿಗೆದಾರರ ಮೂಲಕ ಕೈಗೊಂಡು ಪ್ರಸಕ್ತ ಸಾಲಿನಲ್ಲಿ ಪೂರ್ಣಗೊಳಿಸಿರುತ್ತಾರೆ.

ಇ) ಮಂಡ್ಯ ಜಿಲ್ಲೆ, ಪಾಂಡವಪುರ ತಾಲ್ಲೂಕು, ಮೇಲುಕೋಟೆಯ ಪಂಚಕಲ್ಯಾಣಿ, ಗಣೇಶ ಹೊಂಡ, ಇದಕ್ಕೆ ಹೊಂದಿಕೊಂಡಿರುವ ಕೊಳಗಳ ಸಂರಕ್ಷಣೆಯನ್ನು ಇನ್‌ಫೋಸಿಸ್ ಪ್ರತಿಷ್ಠಾನ(ರಿ) ಬೆಂಗಳೂರು, ಇವರ ವತಿಯಿಂದ ರೂ.6.00ಕೋಟಿಗಳ ಅಂದಾಜು ಮೊತ್ತಕ್ಕೆ ಇಲಾಖೆಯ ವತಿಯಿಂದ ಅನುಮತಿ ನೀಡಿ ದಿನಾಂಕ 20.02.2019ರಂದು ಒಡಂಬಡಿಕೆಗೆ ಸಹಿ ಮಾಡಲಾಗಿದೆ.

**29. ಬಾಹ್ಯ ಸಂಸ್ಥೆಯ ಮೂಲಕ ಅಗತ್ಯ ಸಿಬ್ಬಂದಿಯನ್ನು ನೇಮಕ ಮಾಡಿಕೊಂಡಿರುವುದು:–**

ಈ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ರಾಜ್ಯ ಸಂರಕ್ಷಿತ ಸ್ಮಾರಕಗಳಿಗೆ ಹಾಗೂ ವಸ್ತುಸಂಗ್ರಹಾಲಯಗಳಿಗೆ ಭದ್ರತಾ ಸಿಬ್ಬಂದಿಯನ್ನು KTTP ನಿಯಮಾನುಸಾರ ಟೆಂಡರ್ ಕರೆದು ಬಾಹ್ಯ ಸಂಸ್ಥೆಯ ಮೂಲಕ ನೇಮಕ ಮಾಡಿಕೊಳ್ಳಲಾಗಿದೆ. ಹಾಗೂ ಆಡಳಿತಾತ್ಮಕ ಹಿತದೃಷ್ಟಿಯಿಂದ ಕಛೇರಿ ಕೆಲಸ ಕಾರ್ಯಗಳಿಗೆ ನಿಯಮಾನುಸಾರ ಈ ಕೆಳಕಂಡ ಸಿಬ್ಬಂದಿಗಳ ಸೇವೆಯನ್ನು ಬಾಹ್ಯ ಸಂಸ್ಥೆಯ ಮೂಲಕ ಪಡೆಯಲಾಗುತ್ತಿದೆ.

| **ಕ್ರ.ಸಂ** | **ಬಾಹ್ಯ ಮೂಲದಿಂದ ಪಡೆದ ಸಿಬ್ಬಂದಿಯ ಪದನಾಮ** | **ವೃಂದ** | **ಹುದ್ದೆಗಳ ಸಂಖ್ಯೆ** |
|---|---|---|---|
| 1 | ಪುರಾತತ್ವ ಸಂರಕ್ಷಣಾ ಸಹಾಯಕರು | ಸಿ | 02 |
| 2 | ಛಾಯಾಗ್ರಾಹಕರು | ಸಿ | 01 |
| 3 | ಅಕ್ಷರಸ್ತ ಸಹಾಯಕರು | ಸಿ | 02 |
| 4 | ಕಂಪ್ಯೂಟರ್ ಆಪರೇಟರ್ಸ್ | ಸಿ | 05 |
| 5 | ವಾಹನ ಚಾಲಕರು | ಸಿ | 03 |
| 6 | ಭದ್ರತಾ ಸಿಬ್ಬಂದಿ | ಡಿ | 106 |
| 7 | ಗ್ರೂಪ್–ಡಿ | ಡಿ | 07 |
| | | **ಒಟ್ಟು** | **126** |

**30. ಗೃಹರಕ್ಷಕ ದಳದ ಸಿಬ್ಬಂದಿ:–**

ಹಂಪಿ ವಿಶ್ವ ಪರಂಪರೆ ರಾಜ್ಯ ಸಂರಕ್ಷಿತ ಪ್ರದೇಶ ಹಾಗೂ ಆನೆಗೊಂದಿಯ ಸುತ್ತಮುತ್ತಲಿನ ಪ್ರದೇಶಗಳಲ್ಲಿನ ಐತಿಹಾಸಿಕ ಸ್ಮಾರಕಗಳ ಸಂರಕ್ಷಣೆಗಾಗಿ ಮತ್ತು ವಸ್ತುಸಂಗ್ರಹಾಲಯಗಳ ಭದ್ರತಾ ಹಿತದೃಷ್ಠಿಯಿಂದ ಒಟ್ಟು 40 ಗೃಹರಕ್ಷಕ ದಳದ ಸಿಬ್ಬಂದಿಗಳನ್ನು ಮಹಾನಿರ್ದೇಶಕರು ಗೃಹರಕ್ಷಕ ದಳ, ಬೆಂಗಳೂರು ಇವರಿಂದ ಸರ್ಕಾರದ ಆದೇಶದ ಸಂಖ್ಯೆ:ಕಸಂವಾ 83 ಕೆಎಂಯು 2018 ದಿನಾಂಕ:01.08.2018ರ ಮೇರೆಗೆ ಸೇವೆಯನ್ನು ಪಡೆಯಲಾಗುತ್ತಿದೆ.

**31. ಸಹಾಯಾನುದಾನ:**

- **ಹಂಪಿ ಅಭಿವೃದ್ಧಿ ಪ್ರದೇಶ ನಿರ್ವಹಣಾ ಪ್ರಾಧಿಕಾರದ ನಿರ್ವಹಣೆ:**

  2018–19ನೇ ಆರ್ಥಿಕ ಸಾಲಿನಲ್ಲಿ ಹಂಪಿ ಅಭಿವೃದ್ಧಿ ಪ್ರದೇಶ ನಿರ್ವಹಣಾ ಪ್ರಾಧಿಕಾರದ ನಿರ್ವಹಣೆಗೆ ರೂ.30.00ಲಕ್ಷವನ್ನು ಸರ್ಕಾರಿ ಆದೇಶದ ಮೇರೆಗೆ ಸಹಾಯಾನುದಾನವನ್ನು ಬಿಡುಗಡೆ ಮಾಡಲಾಗಿದೆ.

- **ಸಹ್ಯಾದ್ರಿ ಪಾರಂಪರಿಕ ಅಭಿವೃದ್ಧಿ ಪ್ರಾಧಿಕಾರದ ನಿರ್ವಹಣೆ:**

  2018–19ನೇ ಆರ್ಥಿಕ ಸಾಲಿನಲ್ಲಿ ಸಹ್ಯಾದ್ರಿ ಅಭಿವೃದ್ಧಿ ಪ್ರಾಧಿಕಾರದ ಕಾರ್ಯಕ್ರಮಕ್ಕೆ ರೂ.12.00ಲಕ್ಷಗಳನ್ನು ನಾಲ್ಕು ತ್ರೈಮಾಸಿಕ ಸರ್ಕಾರಿ ಮಂಜೂರಾತಿ ಆದೇಶಗಳನ್ವಯ ಬಿಡುಗಡೆ ಮಾಡಲಾಗಿದೆ.

- **ಚಾಲುಕ್ಯ ಪಾರಂಪರಿಕ ಅಭಿವೃದ್ಧಿ ಪ್ರಾಧಿಕಾರದ ನಿರ್ವಹಣೆ:**

  2018–19ನೇ ಆರ್ಥಿಕ ಸಾಲಿನಲ್ಲಿ ಚಾಲುಕ್ಯ ಅಭಿವೃದ್ಧಿ ಪ್ರಾಧಿಕಾರದ ಕಾರ್ಯಕ್ರಮಕ್ಕೆ ರೂ.25.00ಲಕ್ಷಗಳನ್ನು ಸರ್ಕಾರಿ ಮಂಜೂರಾತಿ ಆದೇಶದನ್ವಯ ಬಿಡುಗಡೆ ಮಾಡಲಾಗಿದೆ.

- **ಲಕ್ಕುಂಡಿ ಅಭಿವೃದ್ಧಿ ಪ್ರಾಧಿಕಾರ:**

  ಸರ್ಕಾರಿ ಆದೇಶ ಸಂಖ್ಯೆ:ಕಸಂವಾ 89 ಕೆಎಂಯು 2017 ಬೆಂಗಳೂರು ದಿನಾಂಕ:16.08.2017ರ ಪ್ರಕಾರ ಲಕ್ಕುಂಡಿ ಅಭಿವೃದ್ಧಿ ಪ್ರಾಧಿಕಾರಕ್ಕೆ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರನ್ನು ನೇಮಿಸಿ ಸರ್ಕಾರದ ಆದೇಶವಾಗಿರುತ್ತದೆ. ಇದುವರೆವಿಗೂ ಲಕ್ಕುಂಡಿ ಅಭಿವೃದ್ಧಿ ಪ್ರಾಧಿಕಾರ ರಚನೆಯಾಗಿರುವುದಿಲ್ಲ.

**32. ಸಂರಕ್ಷಿತ ಸ್ಮಾರಕಗಳ ಘೋಷಣೆ:**

2018–19ನೇ ಸಾಲಿನಲ್ಲಿ ಈ ಕೆಳಕಂಡ ಸ್ಮಾರಕಗಳನ್ನು ಸಂರಕ್ಷಿತ ಸ್ಮಾರಕಗಳೆಂದು ಅಧಿಸೂಚಿಸಿದೆ.

- ಸರ್ಕಾರದ ಅಧಿಸೂಚನೆ ಸಂಖ್ಯೆ:ಕಸಂವಾ/34/ಕೆಎಂಯು/2017 ದಿನಾಂಕ:01.9.2018ರಲ್ಲಿ ಕೊಪ್ಪಳ ಜಿಲ್ಲೆ, ಕೊಪ್ಪಳ ತಾಲ್ಲೂಕು, ಕುಮಾರರಾಮನ ಕುಮ್ಮಟದುರ್ಗ ಪ್ರದೇಶವನ್ನು ರಾಜ್ಯ ಸಂರಕ್ಷಿತ ಸ್ಮಾರಕವನ್ನಾಗಿ ಘೋಷಿಸಲಾಗಿದೆ.
- ಸರ್ಕಾರದ ಅಧಿಸೂಚನೆ ಸಂಖ್ಯೆ:ಕಸಂವಾ/109/ಕೆಎಂಯು/2018 ದಿನಾಂಕ:22.09.2018ರಲ್ಲಿ ಬೀದರ್ ಜಿಲ್ಲೆ, ಬೀದರ್ ನಗರದ ಹಮೀಲಾಪುರ ಜಮೀನಿನಲ್ಲಿರುವ ಅಷ್ಟಕೋನಾಕಾರದ ಮೆಟ್ಟಿಲು ಬಾವಿಯನ್ನು ರಾಜ್ಯ ಸಂರಕ್ಷಿತ ಸ್ಮಾರಕವನ್ನಾಗಿ ಘೋಷಿಸುವ ಸಲುವಾಗಿ ಪ್ರಾಥಮಿಕ ಅಧಿಸೂಚನೆಯನ್ನು ಹೊರಡಿಸಲಾಗಿದೆ.

**33. ಸಾಧನೆಗಳು:**

ಅ) Monuments and forts of Deccan Sultanate ತಾಣವನ್ನು ವಿಶ್ವ ಪರಂಪರೆ ಪಟ್ಟಿ ಸೇರ್ಪಡೆಗೆ ಡೋಸಿಯರ್ ಮತ್ತು ಸೈಟ್ ಮ್ಯಾನೇಜ್‌ಮೆಂಟ್ ಪ್ಲಾನ್‌ನ್ನು ಸಿದ್ಧಪಡಿಸಿ ಭಾರತೀಯ ಪುರಾತತ್ವ ಸರ್ವೇಕ್ಷಣೆಯ ಮುಖಾಂತರ ವಿಶ್ವಪರಂಪರೆ ಪಟ್ಟಿಯ ಆಯ್ಕೆ ಸಮಿತಿಯ ಪರಿಶೀಲನೆಗೆ ಸಲ್ಲಿಸಲಾಗಿದೆ.

**34. ಇಲಾಖೆಯ ವೆಬ್‌ಸೈಟ್:**

ಇಲಾಖೆಯ ವೆಬ್‌ಸೈಟ್‌ನಲ್ಲಿ (www.karnatakaarchaeology.gov.in) ಇಲಾಖೆಯ ಇತಿಹಾಸ, ಇಲಾಖೆಯ ಪ್ರಮುಖ ಚಟುವಟಿಕೆಗಳು, ಕಳೆದ ಮೂರು ವರ್ಷಗಳಲ್ಲಿ ಇಲಾಖೆ ಸಾಧಿಸಿದ ಪ್ರಗತಿಯ ವಿವರಗಳು, ವಾರ್ಷಿಕ ವರದಿಗಳು, ಇಲಾಖೆಯ ಅಧಿನಿಯಮ ಮತ್ತು ಉಪ ನಿಯಮಗಳ ವಿವರ, ಇಲಾಖೆಯ ಪ್ರಕಟಣೆಯ ವಿವರಗಳು, ಸಾರ್ವಜನಿಕರ ಮಾಹಿತಿಗಾಗಿ ಪ್ರಕಟಿತ ಮಾಹಿತಿ ಹಕ್ಕು ಅಧಿನಿಯಮ 4 (1)ಎ ಮತ್ತು 4(1) ಬಿ, ನಾಗರೀಕ ಸನ್ನದು (citizen charter), ಇಲಾಖೆಯ ಸಂರಕ್ಷಿತ ಸ್ಮಾರಕಗಳ ನಿರ್ದೇಶಿಕೆ ಮತ್ತು ಈ ಸ್ಮಾರಕಗಳ ಸಂಕ್ಷಿಪ್ತ ವಿವರಗಳನ್ನೊಳಗೊಂಡ ಮಾಹಿತಿ, ಇಲಾಖೆಗೆ ಸಂಬಂಧಪಟ್ಟ ಪ್ರಮುಖ ಆದೇಶಗಳು, ಇಲಾಖೆಯ ಪ್ರಮುಖ ವಿದ್ಯಮಾನಗಳು (News & Events), ಟೆಂಡರ್‌ಗಳ ಕುರಿತು ಮಾಹಿತಿ, ಸಾರ್ವಜನಿಕ ಆಕ್ಷೇಪಣೆ ಮತ್ತು ಮಾಹಿತಿಗಾಗಿ Query ಸಲ್ಲಿಸಬಹುದಾಗಿದೆ, ಎಫ್.ಎ.ಕ್ಯೂ ಇನ್ನಿತರ ಮಾಹಿತಿಯನ್ನು ಒಳಗೊಂಡಿರುತ್ತದೆ.

**35. ತಾಂತ್ರಿಕ ಸಲಹಾ ಸಮಿತಿ :–**

ಸರ್ಕಾರದ ಆದೇಶದ ಸಂಖ್ಯೆ: ಕಸಂವಾ 94 ಕೆಎಂಯು 2018 ದಿನಾಂಕ:24.09.2018ರಲ್ಲಿ ತಾಂತ್ರಿಕ ಮತ್ತು ಆಡಳಿತಾತ್ಮಕ ಮಂಜೂರಾತಿ ನೀಡುವ ಸಮಿತಿಯ ಅಧಿಕಾರೇತರ ಸದಸ್ಯರನ್ನು ಪುನರ್‌ರಚಿಸಿ ದಿನಾಂಕ 01.04.2018 ರಿಂದ 31.03.2020ರವರೆಗೆ ಮೂರು ವರ್ಷದ ಅವಧಿಗೆ ಮುಂದುವರೆಸಿ ಆದೇಶಿಸಿದೆ. ವಿವರ ಇಂತಿದೆ;

- ಶ್ರೀ ಬಿ.ಅಶ್ವತ್ಥನಾರಾಯಣ, ನಿವೃತ್ತ ಕಾರ್ಯದರ್ಶಿ, ಕರ್ನಾಟಕ ಲೋಕೋಪಯೋಗಿ ಇಲಾಖೆ.
- ಡಾ॥ ಹೆಚ್.ಎಂ.ಸಿದ್ದನಗೌಡರ್, ನಿವೃತ್ತ ನಿರ್ದೇಶಕರು, ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ.
- ಶ್ರೀ ಪರಮಾನಂದನ್, ನಿವೃತ್ತ ಉಪಪುರಾತತ್ವ ಅಧೀಕ್ಷಕ ಇಂಜಿನಿಯರ್, ಭಾರತೀಯ ಪುರಾತತ್ವ ಸರ್ವೇಕ್ಷಣ.

**36. ಇಲಾಖೆಯ ಗ್ರಂಥಾಲಯ:–**

ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು ವತಿಯಿಂದ ಮೈಸೂರಿನ ಅರಮನೆಯ ಆವರಣದಲ್ಲಿ ಒಂದು ಗ್ರಂಥಾಲಯವಿದ್ದು, ಈ ಗ್ರಂಥಾಲಯದಲ್ಲಿ ಪುರಾತತ್ವ, ಇತಿಹಾಸ ವಿಷಯಗಳ ಕುರಿತಂತೆ ಒಂದು ಪುಸ್ತಕ ಬಂಡಾರವಿದ್ದು, ಸುಮಾರು 18398 ಪುಸ್ತಕಗಳನ್ನು ಸಂಗ್ರಹಿಸಲಾಗಿದೆ. ಈ ಗ್ರಂಥಾಲಯಕ್ಕೆ ಬರುವ ವಿದ್ವಾಂಸರಿಗೆ, ಸಂಶೋಧಕರಿಗೆ ಮತ್ತು ಸಾರ್ವಜನಿಕರಿಗೆ ಮುಕ್ತ ಪ್ರವೇಶವಿದೆ. ಆಸಕ್ತರು ಇದರ ಉಪಯೋಗವನ್ನು ಪಡೆಯುತ್ತಿದ್ದಾರೆ.

**37. 2018–19ನೇ ಸಾಲಿನಲ್ಲಿ ವಿಧಾನಸಭೆ/ ವಿಧಾನ ಪರಿಷತ್/ ಭರವಸೆ/ ಲೋಕಸಭಾ ಪ್ರಶ್ನೆ ಇವುಗಳಿಗೆ ಸಂಬಂಧಿಸಿದ ವಿವರಗಳು:**

| ಕ್ರಮ ಸಂ. | ವಿಷಯ | ವಿಧಾನ ಸಭೆ | ವಿಧಾನ ಪರಿಷತ್ | ಗಮನ ಸೆಳೆಯುವ ಸೂಚನೆಗಳು | ಭರವಸೆ | | ಲೋಕಸಭಾ ಪ್ರಶ್ನೆ | ರಾಜ್ಯಸಭೆ |
|---|---|---|---|---|---|---|---|---|
| | | | | | ವಿಧಾನ ಸಭೆ | ವಿಧಾನ ಪರಿಷತ್ | | |
| 1) | ಆಡಳಿತಾತ್ಮಕ ವಿಷಯಗಳು | 05 | 11 | 00 | 00 | 00 | 00 | 00 |
| 2) | ವಸ್ತು ಸಂಗ್ರಹಾಲಯ ಕುರಿತಂತೆ | 01 | 03 | 00 | 00 | 00 | 01 | 00 |
| 3) | ಸಂರಕ್ಷಣಾ ವಿಷಯಗಳು | 02 | 05 | 00 | 16 | 01 | – | – |
| 4) | ಪರಂಪರೆ ವಿಭಾಗ | – | – | – | – | – | – | – |
| 5) | ಆಯವ್ಯಯ ವಿಭಾಗ | – | – | – | – | – | – | – |
| | **ಒಟ್ಟು** | **08** | **19** | **00** | **16** | **01** | **01** | **00** |

**38. ಲೆಕ್ಕ ಪರಿಶೋಧನೆಗೆ ಸಂಬಂಧಿಸಿದಂತೆ ಕಛೇರಿವಾರು ಬಾಕಿ ಇರುವ ಕಂಡಿಕೆಗಳ ವರದಿ:**

ಈ ಇಲಾಖೆಯಲ್ಲಿ ಪ್ರಸ್ತುತ 4**1 ಆಡಿಟ್** ಪ್ಯಾರಾಗಳು ಬಾಕಿ ಇವೆ. ಈ ಆಡಿಟ್ ಪ್ಯಾರಾಗಳಿಗೆ ಕಂಡಿಕೆವಾರು ಉತ್ತರವನ್ನು ನೀಡಲಾಗಿದೆ. 2017–18ನೇ ಸಾಲಿನಲ್ಲಿ ಇಲಾಖೆಯ ಆಡಿಟ್ ಆಗಿರುತ್ತದೆ.

**39. ಅಧಿಕಾರಿಗಳು ಹೊರ ರಾಜ್ಯಕ್ಕೆ ಇಲಾಖಾ ಕರ್ತವ್ಯದ ಮೇರೆಗೆ ಪ್ರವಾಸ ಕೈಗೊಂಡಿದ್ದ ವಿವರ ಮತ್ತು ಉದ್ದೇಶ:**

ಡಾ. ಆರ್. ಗೋಪಾಲ್, ನಿರ್ದೇಶಕರು (ವಸ್ತುಸಂಗ್ರಹಾಲಯಗಳು) ಹಾಗೂ ನಿರ್ದೇಶಕರು (ಪುರಾತತ್ವ) (ಪ್ರಭಾರ) ಇವರು:–

ಅ) ಕೇಂದ್ರ ಸರ್ಕಾರದ ಸಂಸ್ಕೃತಿ ಮಂತ್ರಾಲಯದಿಂದ ವಸ್ತುಸಂಗ್ರಹಾಲಯಗಳ ಉನ್ನತೀಕರಣಕ್ಕಾಗಿ ಧನ ಸಹಾಯ ಮಾಡುತ್ತಿದ್ದು, ಇಲಾಖೆಯ ಅಧೀನದಲ್ಲಿರುವ ವಸ್ತುಸಂಗ್ರಹಾಲಯಗಳನ್ನು ಉನ್ನತೀಕರಿಸಿ ಪ್ರವಾಸಿಗರನ್ನು ಸೆಳೆಯುವಂತೆ ಮಾಡಲು ಅಗತ್ಯವಾದ ಡಿ.ಪಿ.ಆರ್‌ನ್ನು ತಯಾರಿಸುವ ಸಂಬಂಧ ಮಹಾರಾಷ್ಟ್ರದ ಮುಂಬೈನಲ್ಲಿರುವ ಛತ್ರಪತಿ ಶಿವಾಜಿ ವಸ್ತುಸಂಗ್ರಹಾಲಯಕ್ಕೆ ದಿನಾಂಕ 23.05.2018 ರಿಂದ 27.05.2018ರವರೆಗೆ ಭೇಟಿ ನೀಡಿ ಪ್ರಮುಖ ವಿವರಗಳನ್ನು ಕಲೆ ಹಾಕಿರುತ್ತಾರೆ.

ಆ) ದಿನಾಂಕ 17.01.2019ರಿಂದ 19.01.2019ರವರೆಗೆ ವಿಶ್ವ ಪರಂಪರೆ ತಾಣಗಳ ಅಂತಿಮ ಪಟ್ಟಿ ತಯಾರಿಸುವ ಸಂಬಂಧ ನವದೆಹಲಿಯ ಭಾರತೀಯ ಸರ್ವೇಕ್ಷಣಾ ಇಲಾಖೆ ಇಲ್ಲಿ ನಡೆದ ಸಭೆಯಲ್ಲಿ ಭಾಗವಹಿಸಿರುತ್ತಾರೆ.

ಇ) ದಿನಾಂಕ:20.02.2019 ರಿಂದ 23.02.2019 ರವರೆಗೆ ಕಲ್ಕತ್ತಾದಲ್ಲಿ ನಡೆದ Regional Convergence on World Heritage Global strategy in the context of South Asia conference ನಲ್ಲಿ ಭಾಗವಹಿಸಿರುತ್ತಾರೆ.

**40. ಇಲಾಖೆಯಲ್ಲಿ ಅಧಿಕಾರಿ ಹಾಗೂ ಸಿಬ್ಬಂದಿಗಳು ಪಡೆದ ತರಬೇತಿಗಳ ವಿವರಗಳು:**

2018–19ನೇ ಸಾಲಿನಲ್ಲಿ ತರಬೇತಿಗಳ ವಿವರ ಇಂತಿವೆ.

| ಕ್ರ.ಸಂ. | ತರಬೇತಿ ವಿಷಯ ಮತ್ತು ಸ್ಥಳ ಮತ್ತು ದಿನಾಂಕ | ನಿಯೋಜಿಸಿರುವ ಅಧಿಕಾರಿಗಳ ಸಂಖ್ಯೆ | ನಿಯೋಜಿಸಿರುವ ಸಿಬ್ಬಂದಿಗಳ ಸಂಖ್ಯೆ |
|---|---|---|---|
| 1) | ರಾಜ್ಯ ಲೆಕ್ಕಪರಿಶೋಧನೆ & ಲೆಕ್ಕಪತ್ರ ಇಲಾಖೆಯಿಂದ ನಿಯೋಜನೆ ಮೇರೆಗೆ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳಿಗೆ ವಿತ್ತೀಯ ಕಾರ್ಯನೀತಿ ಸಂಸ್ಥೆ (ಎಫ್.ಪಿ.ಐ), ಬೆಂಗಳೂರು ಇಲ್ಲಿ ದಿನಾಂಕ 28.05.2018ರಿಂದ 02.06.2018ರವರೆಗೆ ನಡೆದ Information and Communication Technology ಎಂಬ ವಿಷಯದ ಬಗ್ಗೆ ತರಬೇತಿಗೆ ನಿಯೋಜಿಸುವ ಕುರಿತು. | 01 | – |
| 2) | "ಮಾನಸಿಕ ಒತ್ತಡ ನಿರ್ವಹಣೆ" (Stress Management), ಮೈಸೂರು. ದಿನಾಂಕ 18.05.2018 ರಿಂದ 19.05.2018ರವರೆಗೆ | – | 02 (ತಾಂತ್ರಿಕೇತರ) |
| 3) | "ಕಛೇರಿ ಕಾರ್ಯವಿಧಾನ ನಿಯಮಗಳು (Office Procedure)ಹಾಗೂ ವಿದ್ಯುನ್ಮಾನ ಆಡಳಿತ ವ್ಯವಸ್ಥೆ(E-Governance)/ ಸಂಚಾರಿ ಆಡಳಿತ ವ್ಯವಸ್ಥೆ( Mobile Governance)" . ಮೈಸೂರು. ದಿನಾಂಕ 21.05.2018ರಿಂದ 23.05.2018ರ ವರೆಗೆ. | – | 01 (ತಾಂತ್ರಿಕೇತರ) |
| 4) | "ಆಯವ್ಯಯ ತಯಾರಿಕೆ, ಲೆಕ್ಕಪತ್ರ ತಯಾರಿಕೆ ಮತ್ತು ಆರ್ಥಿಕ ನಿರ್ವಹಣೆ" ಕುರಿತ ತರಬೇತಿ. ಮೈಸೂರು. ದಿನಾಂಕ 24.05.2018ರಿಂದ 26.05.2018ರ ವರೆಗೆ. | – | 01 (ತಾಂತ್ರಿಕೇತರ) |
| 5) | "ಕರ್ನಾಟಕ ನಾಗರೀಕ ಸೇವಾ– ಸಾಮಾನ್ಯ ನೇಮಕಾತಿ ನಿಯಮಗಳು–1977, ಪರೀಕ್ಷಾರ್ಥ ನಿಯಮಗಳು–1977, ಅನುಕಂಪಾರ್ಥ ನೇಮಕಾತಿ ನಿಯಮಗಳು–1996 ಮತ್ತು ಕಂಪ್ಯೂಟರ್ ಸಾಕ್ಷರತಾ ನಿಯಮಗಳು–2012" ಕುರಿತು ತರಬೇತಿ. ಮೈಸೂರು.ದಿನಾಂಕ 29.05.2018ರಿಂದ 30.05.2018ರವರೆಗೆ. | – | 02 (ತಾಂತ್ರಿಕೇತರ) |
| 6) | "88ನೇ ವೃತ್ತಿ ಬುನಾದಿ ತರಬೇತಿ". ಮೈಸೂರು. ದಿನಾಂಕ 04.07.2018ರಿಂದ 29.08.2018ರ ವರೆಗೆ. | – | 02 (ತಾಂತ್ರಿಕೇತರ) |
| 7) | "E-Gov. financials (FBAS) of Municipalities" ರಾಜ್ಯ ನಗರಾಭಿವೃದ್ಧಿ ಸಂಸ್ಥೆ, ಮೈಸೂರು. ದಿನಾಂಕ 17.09.2018ರಿಂದ 19.09.2018ರವರೆಗೆ. | – | 01 (ತಾಂತ್ರಿಕೇತರ) |

| | | | |
|---|---|---|---|
| 8) | "ಖಜಾನೆ-2 ತಂತ್ರಾಂಶ ಕುರಿತು ಗಣಕ ಯಂತ್ರ ಆಧಾರಿತ ತರಬೇತಿ", ಮೈಸೂರು. ದಿನಾಂಕ 12.03.2019ರಿಂದ 13.03.2019ರ ವರೆಗೆ. | – | 02 (ತಾಂತ್ರಿಕೇತರ) |
| 9) | "ಮಹಿಳಾ ಉದ್ದೇಶಿತ ಆಯವ್ಯಯ ಕುರಿತು ತರಬೇತಿ" Fiscal Policy Institute, Bengaluru. ದಿನಾಂಕ 21.03.2019ರಿಂದ 23.03.2019ರವರೆಗೆ | 02 | 01 (ತಾಂತ್ರಿಕೇತರ) |

**ಹೊರ ರಾಜ್ಯದಲ್ಲಿ ಜರುಗಿದ ತರಬೇತಿ/ವಿಚಾರ ಸಂಕಿರಣ/ಕಾರ್ಯಾಗಾರ ಇವುಗಳಲ್ಲಿ ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಭಾಗವಹಿಸಿದ ವಿವರ:**

| ಕ್ರ.ಸಂ. | ಕಾರ್ಯಗಾರದ ವಿಷಯ, ಸ್ಥಳ ಮತ್ತು ದಿನಾಂಕ | ನಿಯೋಜಿಸಿರುವ ಅಧಿಕಾರಿಗಳ ಸಂಖ್ಯೆ | ನಿಯೋಜಿಸಿರುವ ಸಿಬ್ಬಂದಿಗಳ ಸಂಖ್ಯೆ |
|---|---|---|---|
| 1) | "Museum Safety and disaster Management for Heritage". New Delhi. on 11th January, 2019 | 03 | – |

**41. ನಿವೃತ್ತಿ:**

2018–19ನೇ ಸಾಲಿನಲ್ಲಿ ಗ್ರೂಪ್ ಎ–01, ಗ್ರೂಪ್ ಸಿ–04 ಮತ್ತು ಗ್ರೂಪ್ 'ಡಿ' –03 ಜನಸೇರಿದಂತೆ ಒಟ್ಟಾರೆ 08 ಜನವಯೋಮಾನನಿವೃತ್ತಿಯನ್ನುಹೊಂದಿರುತ್ತಾರೆ.

**42. ನ್ಯಾಯಾಲಯದ ಪ್ರಕರಣಗಳ ವಿವರಗಳು:**

| ಕ್ರ.ಸಂ | ನ್ಯಾಯಾಲಯದ ಪ್ರಕರಣಗಳು | 2017–18ನೇ ಸಾಲಿನಲ್ಲಿ ಬಾಕಿ ಇರುವ ಪ್ರಕರಣಗಳು | 2018–19ನೇ ಸಾಲಿನಲ್ಲಿ ದಾಖಲಾದ ಪ್ರಕರಣಗಳು | ಇತ್ಯರ್ಥವಾಗಿರುವ ಪ್ರಕರಣಗಳು | ಇತ್ಯರ್ಥ ಆಗಬೇಕಾದ ಪ್ರಕರಣಗಳು |
|---|---|---|---|---|---|
| 1 | ಸರ್ವೋಚ್ಚ ನ್ಯಾಯಾಲಯ, ನವದೆಹಲಿ (ಸುಪ್ರೀಮ್ ಕೋರ್ಟ್) | 01 | 02 | – | 03 |
| 2 | ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು, ಕಲಬುರಗಿ, ಧಾರವಾಡ (ಹೈಕೋರ್ಟ್) | 89 | 02 | 03 | 88 |

| | | | | | |
|---|---|---|---|---|---|
| 3 | ತಾಲ್ಲೂಕು ಮತ್ತು ಜಿಲ್ಲಾ ನ್ಯಾಯಾಲಯ | 06 | 01 | – | 07 |
| 4 | ಜಿಲ್ಲಾಧಿಕಾರಿಯವರ ನ್ಯಾಯಾಲಯ | 01 | 01 | – | 02 |
| 5 | ಕರ್ನಾಟಕ ಆಡಳಿತ ನ್ಯಾಯಮಂಡಳಿ, ಬೆಂಗಳೂರು | 06 | – | 04 | 02 |
| | ಒಟ್ಟು | 103 | 06 | 07 | 102 |

ಈ ರೀತಿ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಕಾರ್ಯಚಟುವಟಿಕೆಗಳು ಮುಂದುವರಿಯುತ್ತಿವೆ.

ಆಯುಕ್ತರು
ಪುರಾತತ್ವ, ಸಂಗ್ರಹಾಲಯಗಳು ಮತ್ತು
ಪರಂಪರೆ ಇಲಾಖೆ, ಮೈಸೂರು